# LAHARI COMMUNIQUE

*Its Unique!*

Volume : 1 | October-2010 | Part 6 | Price : Rs. 2


# Ayodhya : One third division by two third majority

Curtain fell down on 61 years old series of litigations when the three Judges special bench of Allahabad High Court, Lucknow bench pronounced its judgement at 3.30 p.m. on 29th September 2010 on the historic dispute between Hindu and Muslim groups claiming a piece of land measuring 1500 square yards in Nazul Plot No.583 of Ayodhya town of Faizabad District in Uttar Pradesh.

**Law**

"It is more like a panchayat justice dividing the disputed property among the three contenders. And it is not clear how after dismissing the suit of the Sunni Wakf Board, one third of the property is given to Muslims,"

*- P.P. Rao, Senior Advocate*

**Vs**

**Equity**

"Every Court of law is a Court of equity. Therefore, the judgment is correct even if the relief is granted to a party whose suit is dismissed."

*- Ram Jethmalani, Senor Advocate*

The majority verdict is by two members of the bench, namely Justice Sibghat Ullah Khan and Justice Sudhir Agarwal. The minority judgment was delivered by Justice Dharam Veer Sharma who decreed that entire piece of land should go to Hindu groups. The Majority favoured division of the land into three parts, Ram Lalla and his representatives (the deity of Ram), Nirmohi Akhada and Sunni Central Board of Wakf getting a part each.

*(details in next pages)*

## SC collegium to re write conduct for judges

The Supreme Court collegium is considering the propriety of Judges of constitutional Courts publishing their views through blogs and twitter. The collegium will examine whether it is against the code of conduct for judiciary.

This disclosure was made by Law Ministry in a query raised by an MP whether the Government of India was aware that some High Court judges were airing their voice through blogs and twitter and whether this practice is against the code of conduct of judiciary. The Member of Parliament also wanted to know what preventive measures were being taken to check this trend if this is against the code of conduct of higher judiciary.

The question under RTI Act was referred by the law ministry to the Supreme Court. In reply, the Supreme Court said it was for the government to answer the first part which said whether Government of India was aware that at present some High Court judges are airing their voice through blogs and twitter.

For the remaining part, the Supreme Court said, "the matter is being considered by the Collegium in the light of the Resolution of "Restatement of Values of Judicial Life" as adopted by the Supreme Court in the Full Court meeting held on May 7, 1997."

It may be recollected that J| D.V.Shylendra Kumar of Karnataka High Court was frequently airing his views on the issue of continuation of CJ P.D.Dinakaran in the office.

## SC paves way for smooth functioning of Competition Commission

The Competition Commission of India (CCI) constituted under the Competition Act, 2000 got green signal from the Supreme Court to proceed with pending cases when a bench of the SC consisting of three judges ruled that the Competition Appellate Tribunal (COMPAT) would not interfere with CCI directions to the Director General, Investigation, to probe alleged offences at the preliminary stage. The bench clearly specified that COMPAT will not entertain appeals at the initial level, unless the order impugned is under Section 53A(1)(a) of the (Competition) Act which amounts to final order.

Other features of the order of the Supreme Court are

- The Competition Commission and its investigation wing, the Director General, Investigations, will have to maintain "complete confidentiality" while investigating allegations of anti-competitive practices by corporate houses.
- In case of any breach of confidentiality during the process of investigation, the corporates are entitled to seek appropriate directions from the Competition Commission of India.
- The Director General, Investigations, will have to submit its findings within 45 days of the order of any such enquiry by the CCI.
- The CCI will have to form an opinion within 60 days whether prima facie case exists or not in cases of alleged anti-competitive agreements and/or abuse of dominant position.
- The CCI and the Director General, Investigations, have to ensure that time taken in completion of such proceedings does not adversely affect any of the parties as well as the open market in the purposeful implementation of the Act.

## SC suggests Pay Commission to defence personnel

After observing that the Centre is making army personnel run from pillar to post on their salary disputes, a bench of the Supreme Court consisting of of Justices Markandeya Katju and T S Thakur, asked Attorney General G E Vahanvati and Solicitor General Gopal Subramaniam to seek instructions from the Government as to whether it was open to the idea of a separate pay commission that could be headed by a retired Chief Justice of India or a judge of the Supreme Court.

**Pro Telangana lawyers in AP High Court damaged furniture and threw papers and books at J| C.V. Nagarjuna Reddy for continuing Court proceedings despite the boycott call.**

**In an interaction with editors, Prime Minister Manamohan Singh called upon the Supreme Court not to get into the 'realm of policy formulation'.**

**SEBI's Takeover Regulatory Advisory Committee has invited suggestions and views from the industry on the proposed take over code to be finalized by the SEBI.**

*Justice delayed is justice denied.* ***-Proverb***

**Editor Speaks**

## Judicial verdict the only way out

The Ayodhya judgment by a three Judges special bench of Allahabad High Court at Lucknow bench has neither satisfied the Akhada nor the other contesting party, Sunni Central Board of Wakf, Uttar Pradesh. They have made their intention clear to approach the Supreme Court questioning the validity of the judgment. When deferment of the judgment was sought in the Supreme Court parties to the litigation made clear that they need judgment and not mutual settlement.

Apart from provision for and possibility of appeal, the judgment itself is not final in nature. The question of division of the disputed 1500 square yards of land between three parties has been kept open by the High Court inviting suggestion from the parties concerned. The Court has ordered maintenance of status quo ante as on the date of judgment for a further period of three months.

The State of Uttar Pradesh and the Centre have already shirked the responsibility of division of land to implement the order of the High Court.

Under such circumstances the Supreme Court is the only answer to the vexed question of law and facts.

It is expected of the Supreme Court that it decides the lis as early as possible and put an end to six decades long civil dispute affecting the whole of the Country.

# Brief Summary of Cases Decided by the Allahabad High Court

- OOS No. 1 of 1989 Shri Gopal Singh Visharad Vs. Zahur Ahmad and 8 others.
- OOS No. 3 of 1989 Nirmohi Aakhada etc. Vs.Baboo Priya Dutt Ram and others.
- OOS No. 4 of 1989 Sunni Central Board of Waqfs U.P. Lucknow and others Vs. Gopal Singh Visharad and others.
- OOS No. 5 of 1989 Bhagwan Sri Ram Virajman at Ayodhya and others Vs. Rajendra Singh and others

***Lord Ram (deity of Sri Ram Virajaman) was a litigant before the Allahabad High Court represented by his next friend Deoki Nandan Agarwal.***

These suits were filed by respective parties before the Court of Civil Judge, Faizabad. Thereafter on the request of State of U.P. the cases were transferred to High Court. The Hon'ble CJ constituted a special Bench of three judges at its Lucknow bench. Government of India decided to acquire all area of the disputed property and the suits were abated. Thereafter the apex court directed the special bench to decide the case as per judgment in Dr.M. Ismail Faruqui and others Vs. Union of India and others reported in (1994) 6 SCC 360.

Of all these cases, the case OOS.No.4/1989 by the Sunni Central Board of Wakf Vs Gopal Singh Visharad is more comprehensive and interesting. Therefore, a brief summary of the said case is given hereunder.

**OOS/No. 4 of 1989 (Reg. Suit No.12-61)**

The instant suit was filed for declaration in the year 1961 and thereafter in the year 1995 through amendment, relief for possession was added.

Plaintiff's case in brief is that about 443 years ago Babur built a mosque at Ayodhya and also made cash grant from royal treasury for maintenance of Babri Mosque. It was damaged in the year 1934 during communal riots and thereafter on 23.12.1949 large crowd of Hindus desecrated the mosque by placing idols inside the mosque.

***The verdict is not final in nature. The bench has invited suggestion from parties for actual partition of the property and status quo shall meanwhile be maintained for three months.***

The disputed property was attached under Section 145 Cr.P.C. and thereafter the suit was filed for declaration and for delivery of possession beyond the period of limitation.

On behalf of the defendants separate written statements were filed alleging that structure is not a mosque and it was constructed after demolishing the temple against the tenets of Islam. The A.S.I. report was obtained which proved the earlier construction of Hindu religious nature. On the basis of the report of the Archeological Survey of India, massive structure of religious nature is required to be maintained as national monument under the Ancient Monument Archeological Site and Remains Act, 1958. The Apex Court in AIR 1997 SC 2766 at para 21 directed the Government of India to maintain such national monuments.

Thus, it is mandatory on the part of the Central Government to comply with the provisions of the Act and ensure to maintain the dignity and cultural heritage of this country.

***Prohibitory order referred to as 'Section 144' is issued under Sec. 144 of Criminal Procedure Code by an executive magistrate when the Government apprehends danger to human life, health and safety.***

On behalf of some of the defendants, it was alleged that not only in the outer courtyard but also in the inner courtyard people used to worship the birth place of deity and it is being worshipped from times immemorial.

The Court dismissed the suit.

### Issue wise finding is as under;

***(Issues are re arranged according to their relevance to each others)***

- Issues No. 1 and 1(a) Whether the building in question described as mosque in the sketch map attached to the plaint (hereinafter referred to as the building) was a mosque as claimed by the plaintiffs? If the answer is in the affirmative?
- 1(a) When was it built and by whom-whether by Babar as alleged by the plaintiffs or by Meer Baqi as alleged by defendant No. 13?

**A.** Decided in favour of defendants and against the plaintiffs.

- 1(b) Whether the building had been constructed on the site of an alleged Hindu temple after demolishing the same as alleged by defendant No. 13? If so, its effect?

**A.** Decided in favour of defendants and against the plaintiffs on the basis of A.S.I. Report.

- 1(A). Whether the land adjoining the building on the east, north and south sides, denoted by letters EFGH on the sketch map, was an ancient graveyard and mosque as alleged in para 2 of the plaint? If so, its effect?

***Deleted vide courts order dated 23.2.96.***

- 1-B(a). Whether the building existed at Nazul plot No. 583 of the Khasra of the year 1931 of Mohalla Kot Ram Chandra known as Ram Kot, city Ahodhya (Nazul estate of Ayodhya) ? If so its effect thereon?

**A.** Property existed on Nazul Plot No. 583 belonging to Government.

- 1B(b).Whether the building stood dedicated to almighty God as alleged by the plaintiffs?

**A.** Decided against the plaintiffs.

- 1-B (c ).Whether the building had been used by the members of the Muslim community for

***After extensive excavation, the Archeological Survey of India submitted its report to the High Court during April 2003. This forms basis for the judgment of the HC.***

offering prayers from times immemorial ? If so, its effect?

**A.** Decided against the plaintiffs.

■ 1-B(d).Whether the alleged graveyard has been used by the members of Muslim community for burying the dead bodies of the members of the Muslim community? If so, its effect?

**A.** Decided against the Plaintiffs.

*In view of Issue 1 B (d), Issues No. 2, 4, 10, 15 & 28 were deleted vide court order dated 23.2.96. Issues deleted are :*

■ 2. Whether the plaintiffs were in possession of the property in suit upto 1949 and were dispossessed from the same in 1949 as alleged in the plaint?

■ 4. Whether the Hindus in general and the devotees of Bhagwan Sri Ram in particular have perfected right of prayers at the site by adverse and continuous possession as of right for more than the statutory period of time by way of prescription as alleged by the defendants?

■ 10. Whether the plaintiffs have perfected their rights by adverse possession as alleged in the plaint?

■ 15. Have the Muslims been in possession of the property in suit from 1528 A.D. Continuously, openly and to the knowledge of the defendants and Hindus in general? If so, its effect?

■ 28. "Whether the defendant No. 3 has ever been in possession of the disputed site and the plaintiffs were never in its possession?"

■ 3. Is the suit within time?

**A.** Decided against the plaintiffs and in favour of defendants.

■ 5(a) Are the defendants estopped from challenging the character of property in suit as a Waqf under the administration of plaintiff No. 1 in view of the provision of 5(3) of U.P. Act 13 of 1936? *(This issue has already been decided in the negative vide order dated 21.4.1966 by the learned Civil Judge).*

■ 5(b). Has the said Act no application to the right of Hindus in general and defendants in particular, to the right of their worship?

**A.** Decided against the plaintiffs and in favour of defendants.

■ 5(c). Were the proceedings under the said Act conclusive? *(This issue has already been decided in the negative vide order dated 21.4.1966 by the learned Civil Judge.)*

■ 5(d). Are the said provision of Act XIII of 1936 ultra-vires as alleged in written statement? *(This issue was not pressed by counsel for the defendants, hence not answered by the learned Civil Judge, vide his order dated 21.4.1966).*

■ 5(e). Whether in view of the findings recorded by the learned Civil Judge on 21.4.1966 on issue no. 17 to the effect that, "No valid notification under section 5(1) of the Muslim Waqf Act (No. XIII of 1936) was ever made in respect of the property in dispute", the plaintiff Sunni Central Board of Waqf has no right to maintain the present suit?

■ 5(f). Whether in view of the aforesaid finding, the suit is barred on account of lack of jurisdiction and limitation as it was filed after the commencement of the U.P. Muslim Waqf Act, 1960?

**A.** Both these issues are decided against the Plaintiffs.

■ 6. Whether the present suit is a representative suit, plaintiffs representing the interest of the Muslims and defendants representing the interest of the Hindus?

**A.** Decided in favour of plaintiffs and against the defendants.

■ 7(a). Whether Mahant Raghubar Dass, plaintiff of Suit No. 61/280 of 1885 had sued on behalf of Janma-Sthan and whole body of persons interested in Janma-Sthan?

**A.** Decided against the plaintiffs and in favour of the defendants.

■ 7(b). Whether Mohammad Asghar was the Mutwalli of alleged Babri Masjid and did he contest the suit for and on behalf of any such mosque?

**A.** Decided against the plaintiffs and in favour of the defendants.

■ 7(c). Whether in view of the judgment in the said suit, the members of the Hindu community, including the contesting defendants, are estopped from denying the title of the Muslim community, including the plaintiffs of the present suit, to the property in dispute? If so, its effect?

**A.** Decided against the plaintiffs.

■ 7(d). Whether in the aforesaid suit, title of the Muslims to the property in dispute or any portion thereof was admitted by plaintiff of that suit? If so, its effect?

**A.** Decided against the plaintiffs.

■ 8. Does the judgment of Case No. 6/281 of 1881, Mahant Raghubar Dass Vs. Secretary of State and others, operate as res judicate against the defendants in suit?

**A.** Decided against the plaintiffs and this judgment will not operate as resjudicata against the defendants in suit.

■ 9. Whether the plaintiffs served valid notices under Sec. 80 C.P.C. *(Deleted vide order dated May 22/25, 1990).*

■ 11. Is the property in suit the site of Janam Bhumi of Sri Ram Chandraji?

■ 13. Whether the Hindus in general and defendants in particular had the right to worship the Charans and 'Sita Rasoi' and other idols and other objects of worship, if any, existing in or upon the property in suit?

■ 14. Have the Hindus been worshipping the place in dispute as Sri Ram Janam Bhumi or Janam Asthan and have been visiting it as a sacred place of pilgrimage as of right since times immemorial? If so, its effect?

■ 19(a).Whether even after construction of the building in suit deities of Bhagwan Sri Ram Virajman and the Asthan Sri Ram Janam Bhumi continued to exist on the property in suit as alleged on behalf of defendant No. 13 and the said places continued to be visisted by devotees for purposes of worship? If so, whether the property in dispute continued to vest in the said deities?

■ 19(c). Whether any portion of the property in suit was used as a place of worship by the Hindus immediately prior to the construction of the building in question? If the finding is in the affirmative, whether no mosque could come into existence in view of the Islamic tenets, at the place in dispute?

**A.** Issues No.11, 13, 14, 19(a) and 19(c) decided against the plaintiffs.

■ 12. Whether idols and objects of worship were placed inside the building in the night intervening 22nd and 23rd December, 1949 as alleged in paragraph 11 of the plaint or they have been in existence there since before? In either case, effect?

**A.** Idols were installed in the building in the intervening night of 22/23rd December, 1949.

■ 17. Whether a valid notification under Section 5(1) of the U.P. Muslim Waqf Act No. XIII of 1936 relating to the property in suit was ever done? If so, its effect? *(This issue has already been decided by the learned Civil Judge by order dated 21.4.1966).*

■ 18. What is the effect of the judgment of their lordships of the Supreme Court in Gulam Abbas and others Vs. State of U.P. and others, A.I.R. 1981 SC 2198 on the finding of the learned Civil Judge recorded on 21st April, 1966 on issue No. 17?

**A.** Decided against the plaintiffs and in favour of defendants.

*Both Sri Ram Janmahoomi Nyas, partly aggrieved by the judgment and Sunni Central Board of Wakf, fully aggrieved by the judgment have announced their intention to appeal before the Supreme Court.*

*UP Chief Minister has said that division of land is the responsibility of the Central Government, while the Home Minister, Chidambaram has made it clear that the Centre has no role to play in execution of the judgment as the Centre is not a party to the litigation.*

*The verdict of the Allahabad High Court runs to 8,189 pages in all.*

*The Allahabad High Court had made arrangement for publication of verdict on its website, http://allahabadhighcourt.in. But due to heavy rush, the website crashed.*

- 19(b). Whether the building was land-locked and cannot be reached except by passing through places of Hindu worship? If so, its effect?

A. Decided against the plaintiffs and in favour of the defendants.

- 19(d). Whether the building in question could not be a mosque under the Islamic Law in view of the admitted position that it did not have minarets?

A. Decided against the plaintiffs and in favour of the defendants.

- 19(e). Whether the building in question could not legally be a mosque as on plaintiffs own showing it was surrounded by a graveyard on three sides.

A. Decided against the plaintiffs.

- 19(F). Whether the pillars inside and outside the building in question contain images of Hindu Gods and Goddesses? If the finding is in the affirmative, whether on that account the building in question cannot have the character of Mosque under the tenets of Islam?

A. Decided against the plaintiffs and in favour of the defendants.

- 20(a). Whether the Waqf in question cannot be a Sunni Waqf as the building was not allegedly constructed by a Sunni Mohammedan but was allegedly constructed by Meer Baqi who was allegedly a Shia Muslim and the alleged Mutwalis were allegedly Shia Mohammedans? If so, its effect?

A. Decided against the plaintiffs.

> ***"Here is a small piece of land where angels fear to tread. We do not propose to rush in like fools." – Justice Sibghat Ullah Khan.***

- 20(b). Whether there was a Mutwalli of the alleged Waqf and whether the alleged Mutwalli not having joined in the suit, the suit is not maintainable so far as it relates to relief for possession?

A. Suit is not maintainable and the issue is decided in favour of the defendants.

- 21. Whether the suit is bad for non-joinder of alleged deities?

A. Decided against the plaintiffs and in favour of the defendants.

- 23. If the Wakf Board is an instrumentality of state? If so, whether the said Board can file a suit against the state itself?
- 24. If the wakf Board is state under Article 12 of the constitution? If so, the said Board being the state can file any suit in representative capacity sponsoring the case of particular community and against the interest of another community?

A. Issues No.23 and 24 are decided against the plaintiffs and the suit is not maintainable.

- 25. Whether demolition of the disputed structure as claimed by the plaintiff, it can still be called a mosque and if not whether the claim of the plaintiffs is liable to be dismissed as no longer maintainable?
- 26. Whether Muslims can use the open site as mosque to offer prayer when structure which stood thereon has been demolished?

A. Issues No.25 and 26 are decided against the plaintiffs and in favour of the defendants.

> ***"Every body is jumping guns without reading the judgment." –Mukul Rohatgi, Senior Advocate.***

- 27. Whether the outer court yard contained Ram Chabutra, Bhandar and Sita Rasoi? If so whether they were also demolished on 6.12.1992 along with the main temple?

A. Yes, issue is decided in positive.

- 16. To what relief, if any, are the plaintiffs or any of them, entitled?
- 22. Whether the suit is liable to be dismissed with special costs?

A. Plaintiffs are not entitled for any relief. The suit is dismissed with easy costs.

***(We propose to publish brief summary of other cases decided by the Lucknow Special Bench in the forthcoming issues. Ed.)***

## Obituary

***We regret to inform the sad demise of the following persons***

- **V.T.Rayaraddi,** Senior Advocate expired on 11.09.2010
- **M.C.Pattanashetti,** Advocate expired on 12.09.2010

## EVENTS & HAPPENINGS

- On 17.09.2010 Karnataka Chapter of Indian Federation of Women Lawyers had organised an interactive programme with the Chief Justice of Karnataka, J.S.Khehar in the Patron-in-Chief Hall of Karnataka High Court.
- Advocates Academy, Bengaluru and AAB jointly organized a programme to inaugurate the academic activities of the Academy for the year 2010-2011. The programme was inaugurated by the Governor of Karnataka, H.R.Bharadwaj.
- On 15.09.2010 a lecture programme was organized by Bangalore Literary Union on the importance of Vachana Sahitya. Aravind Jatti, President, Basava Bhavana delivered the lecture.

## Torture Bill faces uncertainty

The Prevention of Torture Bill passed in the Lok Sabha without much debate is facing severe criticism from its supporters and opponents alike.

To ratify the UN Convention against Torture of 1975, of which India was a signatory, the Government drafted the Bill and got it hurriedly passed in the Lok Sabha. But it is facing stiff resistance in the Rajya Sabha.

Experts have pointed out serious lapses in the Bill. To begin with the term "Torture" has not been properly defined in the Bill.

"The bill describes torture only as suffering grievous injuries," said senior Supreme Court lawyer Prashant Bhusan. Electric shocks and water drowning might not inflict "grievous injuries" but they were still acts of torture, Bhusan pointed out.

The nationalist party, BJP has commented that the Bill will "handcuff" police officers against criminals and terrorists.

Another loophole is the lack of provision for compensation in the bill for torture victims. The Bill only provides for punishment for the police officials responsible for torture with upto 10 years of imprisonment. The time limit set in the Bill for filing a complaint against torture is six months.

## Moily not satisfied with functioning of CAG

The Comptroller and Auditor General (CAG) of India has come under the verbal attack of the Union Law Minister, Veerappa Moily for not performing satisfactorily.

Expersing dissatisfaction over the performance of the CAG, Moily said, "post-mortems are good but they can be conducted only when a patient is dead. Scandals and scams are known even when they are being planned and executed. If audit draws attention to them forthwith in a well-published manner, such scandals can be halted mid-stride,"

Pointing out the area of failure, Moily observed, "CAG has not fulfilled for what it was conceptualised by the constitution framers, namely to stop corruption."

***The Central Board of Excise and Customs has notified new duty draw back rates to be effective from September 20.***

***Former Karnataka Police chief R Srikumar and Chairman of Corporation Bank J M Garg have been appointed as Commissioners in the Central Vigilance Commission.***

***Wanted LLB graduate with one or two years work experience for a lawyer's office. Salary commensurate with skills and experience.***

**Please call 080 656560125**

*or mail resume to* **info@vmplaw.co.in**

**Published by** : S. N. Prashanth Chandra, Lahari Advocates Forum, No. 2980, "Laxmideep", 17th Cross, K.R. Road, BSK II Stage, Bangalore-560 070
**Printed at :** Vee Kay Printers & Publishers, # 396, Ooliga Complex, Sampige Road, Malleshwaram, Bangalore-560 003.
**Editor : Aravind. M. Neglur.** aravindneglur@gmail.com **KARBIL 01707 / 10 /1/2009-TC**

# ಲಹರಿ ಸಂವಾದ

ಸಂಪುಟ - ೧ | ಶ್ರೀ ವಿಕೃತಿ ನಾಮ ಸಂವತ್ಸರ ಭಾದ್ರಪದ - ಆಶ್ವೀನ | ಸಂಚಿಕೆ - ೬

ಒಳಗೇನಿದೆ?

ಪುಟ ೧ : ಸುದ್ದಿ
ಪುಟ ೨ : ಲಹರಿ
ಪುಟ ೩ : ಸುದ್ದಿ, ಅಂಕಣ ಮತ್ತು ಓದುಗರ ಓಲೆ
ಪುಟ ೪ : ಸುದ್ದಿ ಮತ್ತು ಅಂಕಣ

## 'ನಿಮ್ಮ ಕೆಲಸ ನೀವು ನೋಡಿಕೊಳ್ಳಿ' :ಸ.ನ್ಯಾ.ಕ್ಕೆ ಪ್ರಧಾನಿ

ನಿಮ್ಮ ಕೆಲಸವನ್ನು ನೀವು ಗಮನಿಸಿ, ನೀತಿ ರೂಪಿಸುವ ಕೆಲಸ ನಮಗೆ ಬಿಡಿ' ಹೀಗೆಂದಿದ್ದಾರೆ, ಪ್ರಧಾನಿ, ಡಾ॥ ಮನಮೋಹನ್ ಸಿಂಘ್. ಪ್ರಧಾನಿ ಹೀಗೆ ಹೇಳಿರುವುದು ಭಾರತದ ಸರ್ವೋಚ್ಚ ನ್ಯಾಯಾಲಯಕ್ಕೆ.

ಸರಕಾರಿ ಉಗ್ರಾಣಗಳಲ್ಲಿ ಕೊಳೆಯುತ್ತಿರುವ ಧಾನ್ಯಗಳನ್ನು ಬಡವರಿಗೆ ಪುಕ್ಕಟ್ಟೆ ಹಂಚಲು ಸರ್ವೋಚ್ಚ ನ್ಯಾಯಾಲಯ ಆದೇಶಿಸಿರುವ ಬಗೆಗೆ ಪ್ರತಿಕ್ರಿಯಿಸುತ್ತ ಪ್ರಧಾನಮಂತ್ರಿ ಸರ್ವೋಚ್ಚ ನ್ಯಾಯಾಲಯಕ್ಕೆ ಮೃದು ಶಬ್ದಗಳಲ್ಲಿ ಎಚ್ಚರಿಸಿದ್ದಾರೆ.

ಬಡತನದ ರೇಖೆಯ ಕೆಳಗಿರುವ ಜನರಿಗೆ ಸರಕಾರಿ ಉಗ್ರಾಣದಲ್ಲಿ ಕೊಳೆಯುತ್ತಿರುವ ಆಹಾರ ಧಾನ್ಯಗಳನ್ನು ಹಂಚಲು ನ್ಯಾಯಾಲಯ ಆದೇಶಿಸಿತ್ತು. ಕೇಂದ್ರ ಕೃಷಿ ಮಂತ್ರಿ ಶರದ್ ಪವಾರ್ 'ಸರ್ವೋಚ್ಚ ನ್ಯಾಯಾಲಯ ಹೇಳಿರುವುದು ಆಜ್ಞೆಯಲ್ಲ, ಬದಲಾಗಿ ಸಲಹೆ' ಎಂದು ಪ್ರತಿಕ್ರಿಯಿಸಿದರು.

ಮರುದಿನ ಸಂಬಂಧಿಸಿದ ಪೀಠ ವಿಚಾರಣೆಯ ವೇಳೆ ತನ್ನ ನಿಲುವು ಸ್ಪಷ್ಟ ಪಡಿಸಲು 'ನಮ್ಮ ಮಾತು ಸಲಹೆಯಲ್ಲ, ಬದಲಾಗಿ ಆಜ್ಞೆ' ಎಂದಿತು.

ಇದಕ್ಕೆ ಪ್ರತಿಕ್ರಿಯಿಸಿರುವ ಪ್ರಧಾನಿ ಸೆ. ೬ ರಂದು ತಮ್ಮ ಗೃಹ ಕಛೇರಿಯಲ್ಲಿ ಕರೆದಿದ್ದ ಸಂಪಾದಕರೊಂದಿಗಿನ ಸಂವಾದದ ಕಾರ್ಯಕ್ರಮದಲ್ಲಿ 'ಧಾನ್ಯಗಳನ್ನು ಪುಕ್ಕಟ್ಟೆಯಾಗಿ ಹಂಚುವುದರಿಂದ ರೈತರಿಗೆ ಬೆಳೆ ಬೆಳೆಯಲು ಪ್ರೋತ್ಸಾಹವಿಲ್ಲದಂತಾಗುತ್ತದೆ. ಇದು ಸರಕಾರದ ನೀತಿ ನಿಯಮಾವಳಿಗೆ ಸಂಬಂಧಿಸಿದ ವಿಷಯ. ಸರ್ವೋಚ್ಚ ನ್ಯಾಯಾಲಯ ಈ ವಿಷಯದಲ್ಲಿ ಮಧ್ಯೆ ಪ್ರವೇಶಿಸಬಾರದು' ಎಂದರು.

*ತೆರಿಗೆ ಕಾನೂನು.....*

## ಜೆಟ್ ಲೈಟ್‌ಗೆ ಹೆವಿ ನಿರ್ದೇಶನ

ಜೆಟ್ ಏರ್‌ವೇಸ್ ವಿಮಾನಯಾನ ಸಂಸ್ಥೆಯ ಅಂಗ ಸಂಸ್ಥೆ ಜೆಟ್ ಲೈಟ್‌ಗೆ ಸರ್ವೋಚ್ಚ ನ್ಯಾಯಾಲಯ ತೆರಿಗೆಗಳ್ಳತನದ ಪ್ರಕರಣದಲ್ಲಿ ಎಪ್ಪತ್ತು ಕೋಟಿ ರೂಪಾಯಿಗಳನ್ನು ಠೇವಣಿಯಾಗಿಡುವಂತೆ ಆದೇಶಿಸಿದೆ.

ಈ ತೆರಿಗೆಗಳ್ಳತನದ ಪ್ರಕರಣ ಸಂಬಂಧಿಸಿರುವುದು ಸೇವಾ ತೆರಿಗೆಯ ವಿಷಯದಲ್ಲಿ. ಸಂಬಂಧಿತ ತೆರಿಗೆ ಅಧಿಕಾರಿ ಜೆಟ್ ಲೈಟ್‌ಗೆ ಸೇವಾ ತೆರಿಗೆಗಳ್ಳತನಕ್ಕೆ ಸಂಬಂಧಿಸಿದಂತೆ ಮತ್ತು ಆ ಮೊತ್ತದ ಮೇಲೆ ಬಡ್ಡಿ ಸೇರಿಸಿದಂತೆ ರೂ. ೨೬೦ ಕೋಟಿಗಳನ್ನು ಇಲಾಖೆಗೆ ತುಂಬುವಂತೆ ಆದೇಶಿಸಿದ್ದರು. ಜೆಟ್ ಈ ಆದೇಶವನ್ನು ಕಸ್ಟಮ್ಸ್ ಎಕ್ಸೈಜ್ ಮತ್ತು ಸೇವಾ ತೆರಿಗೆ ಅಪೆಲೇಟ್ ಟ್ರಿಬ್ಯುನಲ್‌ನಲ್ಲಿ ಪ್ರಶ್ನಿಸಲು ಹೋದಾಗ ಟ್ರಿಬ್ಯುನಲ್ 'ಮೊದಲು ನಿರ್ಧರಿತ ಕರದ ಅರ್ಧದಷ್ಟನ್ನು ಠೇವಣಿಯಾಗಿಟ್ಟ ನಂತರ ಅಪೀಲನ್ನು ಕೈಗೆತ್ತಿಕೊಳ್ಳಲಾಗುವುದು' ಎಂದಿತು.

ಈ ಆಜ್ಞೆಯನ್ನು ದಿಲ್ಲಿ ಉಚ್ಚ ನ್ಯಾಯಾಲಯದ ಮುಂದೆ ಪ್ರಶ್ನಿಸಿದಾಗ, ನ್ಯಾಯಾಲಯ ಠೇವಣಿ ಹಣವನ್ನು ರೂ. ೭೦ ಕೋಟಿಗಿಳಿಸಿತು. ಈಗ ಸರ್ವೋಚ್ಚ ನ್ಯಾಯಾಲಯ ದೆಹಲಿ ಉಚ್ಚ ನ್ಯಾಯಾಲಯದ ಆಜ್ಞೆಯನ್ನು ಎತ್ತಿ ಹಿಡಿದಿದೆ.

## 'ಅರ್ಧಕ್ಕರ್ಧ ಮುಖ್ಯ ನ್ಯಾಯಮೂರ್ತಿಗಳು ಭ್ರಷ್ಟರು' -ಶಾಂತಿ ಭೂಷಣ್.

ಹಿರಿಯ ವಕೀಲ, ಮಾಜಿ ಕೇಂದ್ರ ಕಾನೂನು ಮಂತ್ರಿ, ಶಾಂತಿ ಭೂಷಣ್, 'ಭಾರತದ ೧೬ ಜನ ಮುಖ್ಯ ನ್ಯಾಯಮೂತಿಗಳ ಪೈಕಿ ೮ ಜನ ಖಂಡಿತವಾಗಿಯೂ ಭ್ರಷ್ಟರು' ಎಂದು ಅಭಿಪ್ರಾಯ ಪಟ್ಟಿದ್ದಾರೆ. ತಮ್ಮ ಅಭಿಪ್ರಾಯವನ್ನು ಅಫಿಡವಿಟ್ ರೂಪದಲ್ಲಿ ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಿರುವ ಅವರು 'ಭ್ರಷ್ಟ' ತನಕ್ಕೆ ತಮ್ಮದೆ ವ್ಯಾಖ್ಯೆಯನ್ನು ಕೊಟ್ಟಿದ್ದಾರೆ.

ಶಾಂತಿ ಭೂಷಣ್ ಪ್ರಕಾರ ಭ್ರಷ್ಟ ನ್ಯಾಯಾಧೀಶರೆಂದರೆ ಆರ್ಥಿಕವಾಗಿ ಭ್ರಷ್ಟರು ಮಾತ್ರವಲ್ಲ. ತಮ್ಮ ತೀರ್ಮಾನದಿಂದ ತಾವೆ ಪ್ರತ್ಯಕ್ಷ ಅಥವಾ ಪರೋಕ್ಷ ಪ್ರಯೋಜನ ಪಡೆದಲ್ಲಿ ಅದೂ ಸಹ ನ್ಯಾಯಾಧೀಶರ ಭ್ರಷ್ಟತೆಯೇ. ಯಾವ ಮುಖ್ಯ ನ್ಯಾಯಮೂರ್ತಿಗಳು ತಮ್ಮ ತೀರ್ಮಾನದಿಂದ ಯಾವ ರೀತಿಯ ಪ್ರಯೋಜನವನ್ನು ಪಡೆದಿದ್ದಾರೆಂಬುದನ್ನು ಶಾಂತಿಭೂಷಣ್ ತಮ್ಮ ಅಫಿಡವಿಟ್‌ನಲ್ಲಿ ವಿವರಿಸಿದ್ದಾರೆನ್ನಲಾಗಿದೆ.

ನ್ಯಾಯಾಂಗದಲ್ಲಿ ಉತ್ತರದಾಯಿತ್ವ ತರಲು ಶ್ರಮಿಸುತ್ತಿರುವ ಕ್ಯಾಂಪೇನ್ ಫಾರ್ ಜುಡಿಷಿಯಲ್ ಅಕೌಂಟಬಿಲಿಟಿ ಚಳುವಳಿಯ ಮುಂಚೂಣಿಯಲ್ಲಿರುವ ಶಾಂತಿ ಭೂಷಣ್ ಕೇಂದ್ರದಲ್ಲಿ ಅಲ್ಪಾಯುಷಿಯಾಗಿದ್ದ ಜನತಾ ಸರಕಾರದಲ್ಲಿ ಕಾನೂನು ಮಂತ್ರಿಯಾಗಿದ್ದರು.

ನ್ಯಾಯಾಂಗ ನಿಂದನೆಯ ಪ್ರಕರಣವೊಂದರಲ್ಲಿ ತಮ್ಮನ್ನು ಪ್ರತಿವಾದಿಯಾಗಿ ಸೇರಿಸಿಕೊಳ್ಳಲು ಕೋರಿ ಸಲ್ಲಿಸಿರುವ ಅರ್ಜಿಯೊಂದಿಗೆ ಅವರು ಈ ಅಫಿಡವಿಟ್ ಲಗತ್ತಿಸಿದ್ದಾರೆ.

## ಯೋಧರಿಗಿರಲಿ ರಕ್ಷಣೆ: ವಾಯುದಳದ ಮುಖ್ಯಸ್ಥ

ಕಾಶ್ಮೀರಿಗಳು ಮತ್ತೆ ದಂಗೆಯೆದ್ದಿದ್ದಾರೆ. ಅವರ ಬೇಡಿಕೆಗಳಲ್ಲೊಂದು, ಕಾಶ್ಮೀರಕ್ಕೆ ಈಗ ಅನ್ವಯಿಸುತ್ತಿರುವ ರಕ್ಷಣಾ ಪಡೆಗಳ ವಿಶೇಷಾಧಿಕಾರಗಳ ಕಾಯ್ದೆಯಿಂದ ಕಾಶ್ಮೀರವನ್ನು ವಿನಾಯ್ತಿಗೊಳಿಸಬೇಕೆಂಬುದು.

ಈ ಹಿನ್ನೆಲೆಯಲ್ಲಿ ರಕ್ಷಣಾ ಪಡೆಗಳ ಬೆಂಬಲಕ್ಕೆ ಧಾವಿಸಿರುವ ವಾಯುದಳದ ಮುಖ್ಯಸ್ಥ, ಏರ್ ಚೀಫ್ ಮಾರ್ಷಲ್ ಪಿ.ವಿ. ನಾಯಕ್, 'ಸೈನಿಕರಿಂದ ನೀವು ಕ್ಷಮತೆಯ ಸೇವೆಯನ್ನು ನಿರೀಕ್ಷಿಸುವುದಾದರೆ ಅವರಿಗೆ ಕಾನೂನಿನ ರಕ್ಷಣೆಯನ್ನು ಕೊಡಲೇ ಬೇಕು' ಎಂದಿದ್ದಾರೆ.

ಈ ಕಾಯ್ದೆಯ ಅನುಬಂಧಗಳಂತೆ ಪ್ರಕ್ಷುಬ್ಧ ಪರಿಸ್ಥಿತಿಯ ಪ್ರದೇಶಗಳಲ್ಲಿ ರಕ್ಷಣಾ ಪಡೆಗಳಿಗೆ ಕೆಲ ವಿಶೇಷಾಧಿಕಾರವಿದ್ದು, ದಂಗೆಯೆದ್ದ ನಾಗರೀಕರನ್ನು ಹದ್ದು ಬಸ್ತಿನಲ್ಲಿಡಲು ಸೈನಿಕರು ಸಾಮಾನ್ಯಕ್ಕಿಂತ ಹೆಚ್ಚಿನ ಬಲ ಪ್ರಯೋಗ ಮಾಡ ಬಹುದಾಗಿದೆ. ಅಂಥ ಸಂದರ್ಭಗಳಲ್ಲಿ ಮಾನವ ಹಕ್ಕಿನ ಉಲ್ಲಂಘನೆಯ ಹೆಸರಿನಲ್ಲಿ ಸೈನಿಕರನ್ನು ನ್ಯಾಯಾಲಯಕ್ಕೆಳೆಯುವಂತಿಲ್ಲ. ಈ ಕಾನೂನಿನಂತೆ ಇಂಥ ನ್ಯಾಯಿಕ ಪ್ರಕ್ರಿಯೆಗಳಿಂದ ವಿನಾಯ್ತಿ ಇದೆ.ಇದೇ ಕಾಶ್ಮೀರಿಗಳನ್ನು ಕೆರಳಿಸಿರುವುದು.

**ಎರಡು ಮೂರನೆ ಬಹುಮತದಿಂದ ಒಂದು ಮೂರನೆ ವಿಭಜನೆ**
**ರಾಮ ಜನ್ಮಭೂಮಿ-ಬಾಬ್ರಿ ಮಸೀದಿ ವಿವಾದದ ತೀರ್ಪಿನ ವಿವರಗಳಿಗಾಗಿ**
**ಕಮ್ಯುನಿಕ್ ನೋಡಿ** -ಸಂ.

# ಕುಡುಕ ಪೊಲೀಸರಿಗೆ ಕೈದಿಗಳ ರಕ್ಷಣೆ

ಉತ್ತರ ಪ್ರದೇಶದ ಲಕ್ನೋ ಈಗ ಇನ್ನೊಂದು ಕಾರಣಕ್ಕೆ ಸುದ್ದಿಯಾಗಿದೆ. ಅಲ್ಲಿನ ಸಮೀಪದ ಬಿಜ್ನೋರ್ ಪಟ್ಟಣದಲ್ಲಿ ಈ ಕಳೆದ ತಿಂಗಳ ೨ ರಂದು ಒಂದು ಅಸಾಮಾನ್ಯ ಘಟನೆ ನಡೆಯಿತು. ಕಂಡವರು, ಕೇಳಿದವರೆಲ್ಲ "ಹೀಗೂ ಉಂಟೇ?" ಎಂದು ಹುಬ್ಬೇರಿಸುವಂತಾಯಿತು.

ಅಂದು ವಿಚಾರಣಾಧೀನ ಕೈದಿಗಳಾದ ಸಂಜೀವ್ ಮತ್ತು ಅರುಣ್ ಪಾಲ್ ತಮ್ಮೊಂದಿಗೆ ಪೊಲೀಸನೊಬ್ಬನನ್ನು ಕರೆದುಕೊಂಡು ಬಿಜ್ನೋರ್ ಪೊಲೀಸ್ ಠಾಣೆಗೆ ಹೋಗಿ ತಮ್ಮ ಪರಿಚಯ ಹೇಳಿಕೊಂಡರು. ಅವರ ಪರಿಚಯ ಮತ್ತು ಅವರ ಕಥೆ ಕೇಳಿ ಪೊಲೀಸರು ದಂಗಾಗಿ ಹೋದರು.

ಮೊರಾದಾಬಾದ್ ಜೇಲಿನಿಂದ ಬಿಜ್ನೋರ್ ನ್ಯಾಯಾಲಯದಲ್ಲಿ ಹಾಜರು ಪಡಿಸಲು ಇಬ್ಬರು ಪೊಲೀಸರು ಸಂಜೀವ್ ಮತ್ತು ಅರುಣ್ ಪಾಲ್‌ರನ್ನು ಕರೆದುಕೊಂಡು ಬಂದರು. ಅಂದು ಜನ್ಮಾಷ್ಟಮಿಗಾಗಿ ನ್ಯಾಯಾಲಯಕ್ಕೆ ರಜೆ ಘೋಷಿಸಲಾಗಿತ್ತು. ಈ ಕೈದಿ ಮತ್ತು ಪೋಲಿಸರ ತಂಡ ಮೊರಾದಾಬಾದಿಗೆ ವಾಪಸ್ ತೆರಳಲು ಬಸ್ ನಿಲ್ದಾಣಕ್ಕೆ ಬಂದಾಗ ಪೋಲಿಸರಿಗೆ ಜನ್ಮಾಷ್ಟಮಿಯನ್ನು 'ಸೆಲೆಬ್ರೆಟ್' ಮಾಡಬೇಕೆಂದು ತೋಚಿತು. ಅವರು ಕೈದಿಗಳಿಗೆ ಅಲ್ಲೆ ಕಾಯಲು ಹೇಳಿ ಹತ್ತಿರದ ಬಾರಿಗೆ ನುಗ್ಗಿದರು.

ಇತ್ತ ಕೈದಿಗಳು ಎಷ್ಟು ಹೊತ್ತು ಕಾಯ್ದರೂ ಪೊಲೀಸರು ಬರದಿದ್ದಾಗ, ಕೈದಿಗಳೆ ಪೊಲೀಸರನ್ನು ಹುಡುಕಿಕೊಂಡು ಹೊರಟರು. ಸ್ವಲ್ಪ ಹೊತ್ತಿನ ಹುಡುಕಾಟದ ನಂತರ ಕೈದಿಗಳಿಗೆ ಒಬ್ಬ ಪೊಲೀಸ್ ದೊರೆತ. ಆದರೆ ಅವನು ಎಷ್ಟು ಕುಡಿದಿದ್ದನೆಂದರೆ ಅವನಿಗೆ ಸರಿಯಾಗಿ ನಡೆಯಲೂ ಆಗುತ್ತಿರಲಿಲ್ಲ. ಅವನನ್ನು ಅಂಥ ಸ್ಥಿತಿಯಲ್ಲಿ ಮೊರಾದಾಬಾದ್‌ಗೆ ಕರೆದುಕೊಂಡು ಹೋಗಲು ಸಾಧ್ಯವಿರಲಿಲ್ಲ. ಹಾಗಾಗಿ ಕೈದಿಗಳು ಅವನನ್ನು ನಗರದ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಒಪ್ಪಿಸಲು ನಿರ್ಧರಿಸಿದರು. ಆ ಪ್ರಕಾರ ಕೈದಿಗಳು ಪೊಲೀಸನನ್ನು ಹೇಗೋ ಎಳೆದುಕೊಂಡು ಹೋಗಿ ಪೊಲೀಸ್ ಠಾಣೆಗೆ ಒಪ್ಪಿಸಿ ಉಸ್ಸ್ ಎಂದು ನಿಟ್ಟುಸಿರು ಬಿಟ್ಟು ಕಳ್ಳ ಪೊಲೀಸರ ಕಥೆ ಹೇಳಿಕೊಂಡರು.

ಈಗ ಈ ಪಾನಮತ್ತ ಪೊಲೀಸರ ವಿರುದ್ಧ ತನಿಖೆಗೆ ಆದೇಶಿಸಲಾಗಿದೆಯಂತೆ.

# ಬೆಳ್ಳಿ ಬೆಡಗಲ್ಲಿ ಲಹರಿ ಚಳವಳಿ

ಭಾಗ-೨

ಅನನ್ಯವಾದ ಸವಾಲು-ಸ್ಪರ್ಧೆಗಳಿಂದ ಕೂಡಿದ ವಕೀಲಿ 'ಗಿರಿ' ಸಾಧಾರಣವಲ್ಲ. ಯುದ್ಧ ಸ್ಥಳದಲ್ಲಿ [War Footing) ಏದುಸಿರು ಬಿಡುತ್ತಲೇ ಈ ಗಿರಿಯನ್ನು (ಗುರಿಯನ್ನು) ಏರಬೇಕಾದಂತಹ ವೃತ್ತಿ ವಕೀಲನೆಂಬ ಸಿಪಾಯಿಯದು. ವಕೀಲ ವೃತ್ತಿ ಎಂಬುದು ನಿರಂತರ ಸಮರ. ಕಾನೂನೆಂಬ ಆಯುಧವನ್ನು ಸದಾ ಮಸೆಯುತ್ತಲೇ ಇರಬೇಕು. ಹೀಗಿದ್ದೂ ಒಟ್ಟಾರೆ ವಕೀಲ ಸಮುದಾಯದ ಒಳಿತಿಗಾಗಿ ತಮ್ಮ ಅಮೂಲ್ಯ ಸಮಯ, ತನುಮನ ಧನಗಳನ್ನು ತೆಗೆದಿರಿಸುತ್ತಾ ಸೇವಾನಿರತವಾದ ಸಂಸ್ಥೆಗಳಲ್ಲಿ ಶಿಖರ ಪ್ರಾಯವಾದುದು ಲಹರಿ ವಕೀಲರ ಪರಿವಾರ.

## ಕಮ್ಯೂನಿಕ್ - ಸಂವಾದ

ಒಲೇಲಿ ಒಂದು ಕೊರಡು; ಮನೇಲಿ ಒಂದು ಮುದುಕಿ ಇರಬೇಕಂತೆ. ಇದೀಗ ಆ ನಾಣ್ನುಡಿಯ ಮುಂದಿನ ಭಾಗವಾಗಿ, ವಕೀಲರ ಸಮುದಾಯಕ್ಕೊಂದು ಕಮ್ಯೂನಿಕ್ - ಸಂವಾದ ಅಂದರೂ ನಡೆಯುತ್ತದೆ. ಬೇಕಾದಷ್ಟು ಗುಲಾಬಿಯನ್ನು ಮಾರ್ಕೆಟ್‌ನಿಂದ ಕೊಂಡು ತಂದರೂ, ನಮ್ಮ ಮನೆಯ ಕೈತೋಟದಲ್ಲಿ ಅರಳಿನಿಂತ ಗುಲಾಬಿ ಹೂ ನೀಡುವ ಸಂತಸಕ್ಕೆ ಹೊರಗಿನಿಂದ ತಂದದ್ದು ಸರಿಸಾಟಿಯಿಲ್ಲ. ವ್ಯಾಪಕವಾದ ಚಟುವಟಿಕೆಗಳಿಂದ ಕೂಡಿದ ವಕೀಲರ ಸಮುದಾಯಕ್ಕೊಂದು ಗುಲಾಬಿಯಾಗೇ ತನ್ನ ಪ್ರಭಾವವನ್ನು ಬೀರುತ್ತ ಬಂದು, ಈ ಕ್ಷಣದಲ್ಲಿ ನಿಮ್ಮ ಕೈಲಿದ್ದು, "ಓಹ್ ಎಷ್ಟು ಸೊಗಸಾಗಿ ಬರುತ್ತಿದೆ ಪತ್ರಿಕೆ" ಎಂದು ನಿಮ್ಮ ಬಾಯಲ್ಲಿ ಉದ್ಗಾರ ಹೊರಡಿಸುತ್ತಿರುವ, ವಕೀಲರ, ವಕೀಲರಿಂದ ವಕೀಲರಿಗಾಗಿ ಪ್ರಕಟಗೊಳ್ಳುತ್ತಾ ಬಂದಿರುವ ಕಮ್ಯೂನಿಕ್‌ಗೆ ಈಗ ಇಪ್ಪತ್ತೆರಡನೇ ವರ್ಷ - ಸಂವಾದಕ್ಕೆ ಹನ್ನೊಂದನೇಯದು.

ಲಹರಿ

ಕಮ್ಯೂನಿಕ್ ನ್ಯೂಸ್‌ಲೆಟರ್‌ನ ಉದಯವೂ ನಿಸ್ಸಂಶಯವಾಗಿ 'ಸೂರಿ' ಯೋದಯವೇ ಅರ್ಥಾತ್ ಸೂರ್ಯನಾರಾಯಣ ರಾವ್ ಅವರ ಮೆದುಳಿನ ಶಿಶು. ಎರಡು ದಶಕಗಳಿಗೂ ಮೊದಲು ಕೋರ್ಟ್‌ಗಳ ಆವರಣದಲ್ಲಿ ನಡೆಯುತ್ತಿದ್ದ ಘಟನಾವಳಿಗಳ, ವಕೀಲರ ನಡುವಿನ ಮಾತುಕತೆ, ಚಿಂತನೆ, ಚರ್ಚೆ ವಿಚಾರ ಅಭಿಪ್ರಾಯಗಳ ಅಭಿವ್ಯಕ್ತಿಗೆ ಹಾಗೂ ಈ ಎಲ್ಲ ಮಾಹಿತಿಗಳನ್ನು ನಿಖರವಾಗಿ ಇನ್ನೊಬ್ಬರಿಗೆ ಮುಟ್ಟಿಸಲು ಯಾವುದೇ ಸಾಧನವಿರದಿದ್ದ ಆಗಿನ ಪರಿಸ್ಥಿತಿಯನ್ನು ಮನಗಂಡು, ಅದಕ್ಕೊಂದು ಪರಿಹಾರವೆಂಬಂತೆ 'ಹೌಸ್‌ಮ್ಯಾಗಝೀನ್' ಕಲ್ಪನೆಯಲ್ಲಿ ನ್ಯೂಸ್ ಲೆಟರ್ ಒಂದನ್ನು ಲಹರಿ ವೇದಿಕೆಯ ಆಶ್ರಯದಲ್ಲಿ ಹೊರಲು ತೀರ್ಮಾನವಾಯಿತು. ಆ ಪ್ರಯತ್ನದ ಫಲವಾಗಿ ೧೯೮೯ರ ಏಪ್ರಿಲ್ ತಿಂಗಳಲ್ಲಿ 'ಕಮ್ಯೂನಿಕ್' ಅಸ್ತಿತ್ವಕ್ಕೆ ಬರುವ ಮೂಲಕ ವಕೀಲರ ಪ್ರತಿಭೆ, ಭಾವನೆಗಳ ಅಭಿವ್ಯಕ್ತಿಗೆ ವೇದಿಕೆ ತೆರೆದುಕೊಂಡಿತು.

ಸೂತ್ರಧಾರ ರಾಮಯ್ಯ
೯೪೪೮೩ ೧೧೭೨೧

ಅದುವರೆಗೆ ಕೇವಲ ಗಾಳಿಯಲ್ಲಿ ತೇಲಿ ಮರೆಯಾಗುತ್ತಿದ್ದ, ವಕೀಲ ಸಮುದಾಯಕ್ಕೆ ಮಹತ್ವವೆನಿಸಿದ ಸುದ್ದಿ ಸೂರುಗಳು, ಸುಖ-ದುಃಖಗಳು, ಮಾಹಿತಿಗಳು ನ್ಯಾಯಾಂಗ ವ್ಯವಸ್ಥೆಯ ಬಗೆಗಿನ ದೂರು-ದುಮ್ಮಾನಗಳು, ಗೊಣಗಾಟಗಳು, ಕಮ್ಯೂನಿಕ್‌ನ ಪುಟಗಳಲ್ಲಿ ಪುಟಿದೆದ್ದವು. ಪರಿಣಾಮ ವಕೀಲರ ಸಂಘ, ಸಂಸ್ಥೆಗಳ ನ್ಯಾಯಾಂಗ ಅಧಿಕಾರಿಗಳ ವಲಯದಲ್ಲಿ 'ತಮ್ಮನ್ನು ಗಮನಿಸಲಾಗುತ್ತಿದೆ" ಎಂಬ ಬಗ್ಗೆ ಯತ್‌ಕಿಂಚಿತ್ ಎಚ್ಚರವನ್ನು ಮೂಡಿಸುವಲ್ಲಿ ಯಶಸ್ವಿಯಗಿ, ಅದುವರೆವಿಗೂ ಇದ್ದ ಸ್ವಚ್ಛಂದ ನಡವಳಿಕೆಗಳಿಗೆ ಸ್ವಲ್ಪ ಕಡಿವಾಣ ಬಿದ್ದಿರಲೂ ಸಾಕು.

ಪ್ರಾರಂಭದಲ್ಲಿ ನ್ಯಾಯಾಲಯಗಳ ಆವರಣದಲ್ಲಿ ನಡೆಯುತ್ತಿದ್ದ ಸಮಾರಂಭಗಳು, ಲಾ ಲೆಕ್ಚರ್ಸ್, ಸಾಂಸ್ಕೃತಿಕ ಕಾರ್ಯಕ್ರಮಗಳು, ಆಗಾಗ ಬದಲಾಗುತ್ತಿದ್ದ ವಕೀಲರ ಛೇಂಬರ್ಸ್ ಕುರಿತ ಮಾಹಿತಿಗಳು, ಅವರ ವಿದೇಶ ಪ್ರವಾಸ, ಪ್ರವಾಸಕಥನ, ವಕೀಲರ ಮತ್ತವರ ಮಕ್ಕಳ ವಿಶೇಷ ಸಾಧನೆಗಳ ಬಗ್ಗೆ ಲೇಖನಗಳು ಪ್ರಕಟವಾಗುತ್ತಿದ್ದವು. ಪತ್ರಿಕೆ ಜನಪ್ರಿಯವಾಗುತ್ತಿದ್ದಂತೆ ನ್ಯಾಯಮೂರ್ತಿ ಶಿವರಾಜ್ ಪಾಟೀಲ್ ಅವರ ಸಲಹೆಯಂತೆ ಪ್ರತಿತಿಂಗಳು ಪ್ರಮುಖವಾದ ತೀರ್ಪುಗಳ ಕುರಿತು ಸಂಕ್ಷಿಪ್ತ ಮಾಹಿತಿಗಳನ್ನು ಪತ್ರಿಕೆ ಪ್ರಕಟಿಸಲು ಪ್ರಾರಂಭಿಸಿತು. ಲಾ ಜರ್ನಲ್‌ಗಳಲ್ಲಿ ಪ್ರಕಟವಾಗುವುದಕ್ಕೆ ಮೊದಲೆ ಕಮ್ಯೂನಿಕ್‌ನಲ್ಲಿ ಪ್ರಕಟವಾಗುತ್ತಿದ್ದ ಮಾಹಿತಿ ಪಡೆಯುತ್ತಿದ್ದ ವಕೀಲರು, ಕೋರ್ಟ್ ಕಲಾಪಗಳಲ್ಲಿ ಸದರೀ ಸೈಟೇಷನ್‌ಗಳನ್ನು ನೀಡುತ್ತಾ ಕಮ್ಯೂನಿಕ್ ಅನ್ನು ರೆಫರ್ ಮಾಡುತ್ತಿದ್ದ ಸಂದರ್ಭಗಳು ಉಂಟು. ಕಮ್ಯೂನಿಕ್‌ಗೆ ಐದು ವರ್ಷಗದಳು ತುಂಬಿದಾಗ ಭರ್ಜರಿಯಾದ ಸಮಾರಂಭವನ್ನು ಆಚರಿಸಲಾಯಿತು. ಅಂದಿನ ಮುಖ್ಯನ್ಯಾಯಮೂರ್ತಿ ಎಸ್.ಬಿ. ಮಜ್ಮುದಾರ್ ಹಾಗೂ ಆಗಿನ ಸರ್ಕಾರದಲ್ಲಿ ಮಂತ್ರಿಗಳಾಗಿದ್ದ ಕೆ.ಹೆಚ್. ರಂಗನಾಥ್ ಅವರು ಸಮಾರಂಭದಲ್ಲಿ ಭಾಗವಹಿಸಿದ್ದರು.

ನ್ಯಾಯಾಂಗ ಕಲಾಪಗಳಲ್ಲಿ ಕನ್ನಡದ ಬಳಕೆ ಹೆಚ್ಚಾದ ಸಂದರ್ಭದಲ್ಲಿ ಆ ಬಗೆಗಿನ ಸುದ್ದಿ-ಮಾಹಿತಿಗಳೇ ಅಲ್ಲದೆ ವಕೀಲರಲ್ಲಿ ಸುಪ್ತವಾಗಿದ್ದ ಸಾಹಿತ್ಯದ ಪ್ರತಿಭೆಗಳ ಅಭಿವ್ಯಕ್ತಿಗೆ ಅನುಕೂಲ ಕಲ್ಪಿಸುವ ದೃಷ್ಟಿಯಿಂದ ಎರಡು ಪುಟಗಳ 'ಸಂವಾದ' ನ್ಯೂಸ್ ಲೆಟರ್ ೨೦೦೦ರ ಏಪ್ರಿಲ್ ಮಾಹೆಯಿಂದ ಪ್ರಕಟಣೆ ಪ್ರಾರಂಭವಾಯಿತು.

ಸುದ್ದಿಗಳು, ಲೇಖನ ಮಾಲೆಗಳು, ವೃತ್ತಿಯ ಜೊತೆಗೆ ಇತರೆ ಚಟುವಟಿಕೆಗಳಲ್ಲಿ ಸಾಧನೆ ಮಾಡಿದ, ವಕೀಲರ ಸಂದರ್ಶನಗಳು ಹಾಸ್ಯ, ಕಾವ್ಯ-ಚುಟುಕ ಇತ್ಯಾದಿ ಬರಹಗಳು ಪ್ರಕಟವಾದವು. ಜಿ.ಎಸ್. ನಟರಾಜನ್ ಅವರ ಸಂಪಾದಕ ಮಟ್ಟದಲ್ಲಿ ಸುಮಾರು ಹತ್ತು ವರ್ಷಗಳು 'ಸಂವಾದ' ಪ್ರಕಟವಾದ ನಂತರ ಇದೀಗ ಹೊಸ ಸಂಪಾದಕರ ಸಾರಥ್ಯದಲ್ಲಿ, ನಾಲ್ಕು ಪುಟಗಳಿಗೆ ವಿಸ್ತಾರಗೊಂಡು ವೈವಿಧ್ಯಮಯ ಶೀರ್ಷಿಕೆ ಮತ್ತು ವಿನ್ಯಾಸಗಳಲ್ಲಿ ಹೊರಬರುತ್ತಿದ್ದು ಸಂವಾದಕ್ಕೆ ಹೊಸ ಕಾಂತಿ ಮೂಡಿದೆ.

ನ್ಯಾಯಾಂಗ ಸಂಗತಿಗಳ ವಸ್ತು ನಿಷ್ಠ ವರದಿ ಹಾಗೂ ನಿಷ್ಪಕ್ಷಪಾತವಾಗಿ ನಿರ್ಭಯವಾಗಿ ಕೆ. ಸೂರ್ಯನಾರಾಯಣರಾವ್ ಅವರು ಬರೆದಿರುವ ಸಂಪಾದಕೀಯಗಳು ಆಯಾಕಾಲದ ಅಮೂಲ್ಯ ದಾಖಲೆಗಳಾಗಿದ್ದು, ಅವನ್ನೆಲ್ಲಾ ಪುಸ್ತಕ ರೂಪದಲ್ಲಿ ಹೊರತಂದರೆ ಮುಂದಿನ ಪೀಳಿಗೆಗೆ ದಾರಿ ದೀಪವಾಗುವುದರಲ್ಲಿ ಸಂದೇಹವಿಲ್ಲ. ಅಂತೆಯೇ ವಿವಿಧ ವಿಷಯಗಳನ್ನು ಕುರಿತಂತೆ ನ್ಯಾಯವೇತ್ತರು ಕಮ್ಯೂನಿಕ್ - ಸಂವಾದದಲ್ಲಿ ಬರೆದಿರುವ ಲೇಖನಗಳನ್ನು ಗ್ರಂಥರೂಪದಲ್ಲಿ ಪ್ರಕಟಿಸುವ ಅವಶ್ಯಕತೆಯಿದೆ. ಕಾರಣ ಈ ಲೇಖನಗಳು ನ್ಯಾಯಾಂಗದ ವೃತ್ತಿಯ ಮೇಲಿನ ಬದ್ಧತೆಯಿಂದ (Conviction) ಬರೆದಂತಹವು. ಕಮ್ಯೂನಿಕ್ ಸಂವಾದದಲ್ಲಿ ಬರುವ ಎಲ್ಲಾ ಕಾಲಂಗಳೂ ಎಷ್ಟು ಮುಖ್ಯವೆಂಬುದಕ್ಕೆ ಒಂದು ಉದಾಹರಣೆ: ಶ್ರದ್ಧೆಯಿಂದ ಕಂಪೈಲ್ ಮಾಡಿ ಬರೆಯುವ ನೂರಕ್ಕೆ ನೂರರಷ್ಟು 'ಸತ್ಯ' ವಾದ, ಆಗೇ ತೀರುವ ಒಬಿಚುಯರಿ ಕಾಲಮ್. ಸೂರಿ ಹೇಳುತ್ತಾರೆ "ಸಾವಿರಾರು ಮಂದಿ ವಕೀಲರು, ಅವರಲ್ಲಿ ಎಪ್ಪತ್ತು ಎಂಬತ್ತು ಮೀರಿದ್ದದರೂ ಉಂಟು. ಕೆಲವಾರು ದಿನ, ತಿಂಗಳು ಕೋರ್ಟಿನ ಬಳಿ ಕೆಲವು ಮುಖಗಳನ್ನು ಕಾಣದೆ, "ಪಾಪ! ಏನಾಯ್ತೋ? ಯಾಕೋ ಬರ್ತಾ ಇಲ್ವೆ ಮಿಸ್ಟರ್ ಎಕ್ಸ್, ವೈ. ಜಡ್" ಎಂಬಂತಾ ಚಿಂತಾಜನಕ ಪರಿಸ್ಥಿತಿ ಕಮ್ಯೂನಿಕ್ ಬಂದ ಮೇಲೆ, ಒಬಿಚ್ಯುಯರಿ ಕಾಲಮ್ ನೋಡಿದ ಮೇಲೆ ಪರಿಸ್ಥಿತಿ ತಿಳಿಯಾಗುತ್ತದೆಯಂತೆ, ಲಾಂಗ್ ಲಿವ್ ಕಮ್ಯೂನಿಕ್ ಆ್ಯಂಡ್ ದಿ ರೀಡರ್ಸ್ ಅನ್ನೋಣ.

ಇದೀಗ 'ಕಮ್ಯೂನಿಕ್ ಸಂವಾದ' ನೊಂದಾಯಿಸಲ್ಪಟ್ಟಿದ್ದು ಖಾಸಗಿ ಪ್ರಸಾರ ಪತ್ರಿಕೆಯ ವೇಶವನ್ನು ಕೊಡವಿ ಸಾರ್ವಜನಿಕವಾಗಿದೆ. ಆಜೀವ ಸದಸ್ಯರನ್ನು ಸೇರಿ ಸುಮಾರು ಎರಡು ಸಾವಿರ ಚಂದಾದಾರರಿದ್ದಾರೆ. ಪತ್ರಿಕೆ ಈ ಮಟ್ಟಕ್ಕೆ ಬೆಳೆಯಲು ಸಹೃದಯ 'ಲರ್ನೆಡ್' ಓದುಗರೇ ಕಾರಣ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ.


ಪತ್ರಿಕೆಗೆ ಪ್ರೀತಿಯಿಂದ ಲೇಖನಗಳನ್ನು ಬರೆಯುತ್ತಿರುವ ಎಸ್.ಎನ್.ಪ್ರಶಾಂತಚಂದ್ರ, ಜಿ. ರಂಗರಾಜನ್ ಎಸ್.ವಿ. ಸುಬ್ರಮಣ್ಯಮ್, ಜಿ.ಎಸ್.ನಟರಾಜನ್, ಸೂರ್ಯನಾರಾಯಣರಾವ್, ಎಂ. ರಾಂ ಭಟ್ ಇವರನ್ನೆಲ್ಲ ಆಫ್‌ಕೋರ್ಸ್ ಹೃತ್ಪೂರ್ವಕವಾಗಿ ನಾವು ಹೊಗಳೋರೆ ಅಂತ ತಿಳೀರಿ. ಅಂತೆಯೇ ಪತ್ರಿಕೆಯ ಪ್ರಸರಣದ ಹೊಣೆಹೊತ್ತ ಎಸ್. ಗೋಪಾಲ್ ಚಂದ್ರಮೋಹನ್, ವಿವೇಕಾನಂದ, ಮತ್ತು ಸೂರ್ಯನಾರಾಯಣರಾವ್ ಇವರ ನೋಬಲ್ ಕೆಲಸಗಳಿಗೆ ಪ್ರಶಸ್ತಿಯೂ ಕಡಿಮೆ ಬಿಡಿ. ಸೂರಿಯವರಂತೂ ಪ್ರತಿ ತಿಂಗಳು ಪತ್ರಿಕೆಯ ಹೊರೆ ಹೊಣೆ ಹೊತ್ತು 'ಭಾಸ್ಕರ್, ನಾಯಕ್, ಸೈಫುಲ್ಲಾ, ಥಾಮಸ್, ಪಾಟೀಲ್, ವೀಣಾ' ಹೀಗೆ ಚಂದಾದಾರರ ಸಹಸ್ರನಾಮಗಳನ್ನು ಕೂಗಿಕರೆಯುತ್ತ ಪತ್ರಿಕೆಯನ್ನು ಮುದ್ದಾಂ ನೀಡುವ ದೃಶ್ಯವಂತೂ ಅಪ್ಯಾಯಮಾನ.

ಪ್ರಸ್ತುತ ಬಹುತೇಕ ಬೆಂಗಳೂರಿಗೆ ಸೀಮಿತವಾಗಿರುವ ಪತ್ರಿಕೆ (ಕೆಲವು ಜಿಲ್ಲೆಗಳನ್ನು ಹೊರತುಪಡಿಸಿ) ರಾಜ್ಯಮಟ್ಟದ ಪತ್ರಿಕೆಯಾಗಿ ಸಂಚಲನವನ್ನುಂಟು ಮಾಡಬೇಕೆಂಬ ಕನಸನ್ನು ಹೊತ್ತಿರುವ ಸಂಪಾದಕ ವರ್ಗಕ್ಕೆ ಹಾಗೂ ಲಹರಿ ಪರಿವಾರದ ಎಲ್ಲಾ ಪದಾಧಿಕಾರಿಗಳಿಗೆ ಅಭಿನಂದಿಸೋಣ.

-ಮುಂದುವರಿಯುವುದು

### -: ಸೂಚನೆ :-

- ಲಹರಿ ವಕೀಲರ ವೇದಿಕೆಯ ಆಜೀವ ಸದಸ್ಯತ್ವ ಶುಲ್ಕವನ್ನು ಹಾಲಿ ರೂ. ೫೦೦/- ರಿಂದ ರೂ. ೧೦೦೦/-ಕ್ಕೆ ಹೆಚ್ಚಿಸಲಾಗಿದೆ. ಮಾನ್ಯ ಸದಸ್ಯರಲ್ಲಿ ಉಳಿಕೆ ಹಣವನ್ನು ಶೀಘ್ರವಾಗಿ ಪಾವತಿಸಲು ಕೋರಲಾಗಿದೆ.
- ವಾರ್ಷಿಕ ಸದಸ್ಯತ್ವ ಶುಲ್ಕವನ್ನು ರೂ. ೫೦/-ಕ್ಕೆ ಹೆಚ್ಚಿಸಲಾಗಿದೆ.
- ಕಮ್ಯುನಿಕ್ ಮತ್ತು ಸಂವಾದ ಪತ್ರಿಕೆಗಳ ವಾರ್ಷಿಕ ಚಂದಾ ದರ ರೂ. ೪೦/-ಕ್ಕೆ ಹೆಚ್ಚಿಸಲಾಗಿದೆ ಮತ್ತು ಅಂಚೆ ಬಟವಾಟೆಗೆ ಚಂದಾ ಹಣವನ್ನು ರೂ. ೧೦೦/-ಕ್ಕೆ ನಿಗದಿಗೊಳಿಸಲಾಗಿದೆ.




**ಆಲಿಸಿ ನೋಡು...**
**ಪಾಲಿಸಿ ನೋಡು...**

ಹಿರಿಯ ವಕೀಲರೊಂದಿಗೆ ಮಾತಾಡುವಾಗ ಗೌರವವಿರಲಿ.
ಅವರ ಮಾತು ಗಮನವಿಟ್ಟು ಕೇಳಿ.

*ಚಿತ್ರ: ಡಿ.ಎಂ. ಹೆಗಡೆ* *ಬರಹ: ಎಸ್. ಎನ್. ಪ್ರಶಾಂತ ಚಂದ್ರ*

ಲಹರಿ ಪುಸ್ತಕ ಭಂಡಾರಕ್ಕೆ ಪುಸ್ತಕವನ್ನು ಕಾಣಿಕೆಯಾಗಿ ಕೊಡಲಿಚ್ಛಿಸಿದ್ದೀರಾ?
ಭಂಡಾರದಿಂದ ಪುಸ್ತಕ ಎರವಲು ಪಡೆಯಬೇಕಾಗಿದೆಯೆ?

ಸಂಪರ್ಕಿಸಿ:
ನಾಗೂರ್ ರೋಜಾ
ನಿರ್ದೇಶಕಿ, ಲಹರಿ ಪುಸ್ತಕ ಭಂಡಾರ,
ಮೊಬೈಲ್ ನಂ. ೯೩೪೧೯೬ ೨೯೦೦

# ಕೆನಡಾದಲ್ಲೊಬ್ಬ ಕನ್ನಡಿಗ

ಮಗಳು ಅಳಿಯಂದಿರ ಆಹ್ವಾನದ ಮೇರೆಗೆ ಕೆನಡಾ ನೋಡುವ ಅವಕಾಶ ನನಗೆ ಒದಗಿ ಬಂದದ್ದು ಸಪ್ಟೆಂಬರ್ ತಿಂಗಳಲ್ಲಿ. ೨೦-೯-೨೦೧೦ರಂದು ಬೆಳಿಗ್ಗೆ ಏಳು ಗಂಟೆಗೆ ಹೊರಟ ಬ್ರಿಟಿಷ್ ಏರ್‌ವೇಸ್ ವಿಮಾನ ೯ ಗಂಟೆಗಳಲ್ಲಿ ೮೫೦೦ ಕಿ.ಮೀ. ದೂರದ ಲಂಡನ್ ತಲುಪಿಸಿತು. ಮತ್ತೊಂದು ಬ್ರಿಟಿಷ್ ಏರ್‌ವೇಸ್ ವಿಮಾನ ಎರಡು ಗಂಟೆಗಳ ನಂತರ ೫೫೦೦ ಕಿ.ಮೀ. ದೂರದ ಟೋರಾಂಟೋ ಸೇರಲು ಹೊರಟು ಅಟ್ಲಾಂಟಿಕ್ ಸಾಗರ ದಾಟಿ ಏಳು ಗಂಟೆಗಳ ಕಾಲಾವಧಿಯಲ್ಲಿ ಮಿಸಿಸಾಗಾ ನಗರದಲ್ಲಿರುವ ಟೋರಾಂಟೋ ವಿಮಾನ ನಿಲ್ದಾಣ ತಲುಪಿತು. ಮಗಳು, ಅಳಿಯಂದಿರ ಆದರದ ಸ್ವಾಗತದಲ್ಲಿ ನಮ್ಮ ಕೆನಡಾ ಪ್ರವಾಸ ಆರಂಭವಾಯಿತು.



ಜಿ.ಎಸ್. ನಟರಾಜನ್
೯೯೧೬೯ ೧೯೪೮೧

ನನ್ನ ಮಗಳು ನಯನಾ ಇರುವ ಮಿಸಿಸಾಗಾ ನಗರವು ಟೋರಾಂಟೋ ನಗರದ ಮುಂದುವರಿದ ಭಾಗಗಳಲ್ಲೊಂದು. ಈ ನಗರಗಳಲ್ಲದೆ, ಬ್ರಾಮ್ಟನ್, ಹ್ಯಾಮಿಲ್ಟನ್, ಸ್ಕಾರ್‌ಬರೋ ಇತ್ಯಾದಿ ನಗರಗಳನ್ನು ಒಳಗೊಂಡಂತೆ ಇವೆಲ್ಲ ಇರುವುದು ಕೆನಡಾದ ಮುಖ್ಯ ರಾಜ್ಯ ಆಂಟಾರಿಯೋದಲ್ಲಿ. ಇಡೀ ಕೆನಡಾದ ಜನಸಂಖ್ಯೆಯ (ಸುಮಾರು ೪.೫ ಕೋಟಿ) ಶೇ. ೨೫ ರಷ್ಟು ಜನಸಂಖ್ಯೆ ಈ ರಾಜ್ಯದಲ್ಲಿಯೇ ನೆಲೆಸಿದ್ದು ಪ್ರಖ್ಯಾತ 'ನಯಾಗರಾ' ಜಲಪಾತ ಇರುವುದೂ ಇಲ್ಲಿಯೇ. ನಯಗರಾ ಒಂದು ರಮ್ಯ ಜಲಪಾತ. ಟೋರಾಂಟೋ ನಗರದಿಂದ ೧೨೭ ಕಿ.ಮೀ. ದೂರವಿರುವ ಈ ಜಲಪಾತ ಮುಟ್ಟಲು ೭೦ ನಿಮಿಷದ ಬಸ್ ಪ್ರಯಾಣ ಸಾಕು ಎಂದರೆ ಅಚ್ಚರಿಯಾಗುತ್ತದೆ. ಇಲ್ಲಿನ ಪಬ್ಲಿಕ್ ಬಸ್‌ಗಳು ಗಂಟೆಗೆ ೧೦೦ ಕಿ.ಮೀ. ಓಡುವುದು ಸರ್ವೆಸಾಮಾನ್ಯ. ಈ ಬಸ್‌ಗಳಲ್ಲಿ Toilet ಸೌಲಭ್ಯ, Internet ಸೌಲಭ್ಯ ಕೂಡ ಉಂಟು. ಇಡೀ ಬಸ್ಸಿಗೆ ಬಸ್ ಡ್ರೈವರ್‌ನೇ ಕ್ಲೀನರ್, ಕೂಲಿ, ಗೈಡ್, ಎಲ್ಲ. ಇಲ್ಲಿ ಯಾರೂ ಕೆಲಸಮಾಡುವಾಗ ಮುಖ ಕಿವಿಚಿಕೊಂಡು ಕೆಲಸ ಮಾಡಿದ್ದೇ ನಾನು ನೋಡಲಿಲ್ಲ. ಶಿಸ್ತು, ಸಂಯಮ ಅವರ ರಕ್ತದಲ್ಲಿ ಸೇರಿಹೋಗಿದೆಯೇನೋ ಎಂಬ ಹಾಗೆ ಕೆನಡಾದ ಜನ. ಪ್ರಯಾಣಿಕರೆಂದರೆ ಅವರಿಗೆ ಗೌರವಾರ್ಹರು. ಇಳಿಯುವವರೆಲ್ಲಾ ಇಳಿಯುವವರೆಗೂ ಬಸ್ ಹತ್ತುವಂತಿಲ್ಲ. ಹತ್ತುವರೂ ಸಾಲಾಗಿ ಬಂದು ಕಾಸನ್ನು ತುಂಬಿದರೆ ಟಿಕೆಟ್ ನಿಮ್ಮ ಕೈಗೆ. ವಿಕಲಚೇತನರು ಸಲೀಸಾಗಿ ನಗರ, ಊರುಗಳನ್ನು ಸುತ್ತುತ್ತಾರೆ, ತಮ್ಮ ವಿಶೇಷ ಕುರ್ಚಿ ವಾಹನಗಳ ನೆರವಿನಲ್ಲಿ. ಬಸ್‌ಗಳಲ್ಲಿ, ಟ್ರೇನ್‌ಗಳಲ್ಲಿ ಇವರಿಗೆ ಆದ್ಯತೆಯ ಸ್ಥಾನ.

ಕೆನಡಾ ಪ್ರಕೃತಿ ನಗರ. ನೀರು, ಹಸಿರಿನ ರಕ್ಷಣೆ ಇವರ ಚರಮ ಗುರಿಯೇನೊ ಅನ್ನಿಸದಿರದು.

ಸ್ವಸ್ಥವಾಗಿ ಮಗಳ ಮನೆಯಲ್ಲಿ ಹೆಂಡತಿಯೊಂದಿಗೆ ಒಂದೆರಡು ದಿನಗಳು ಕಳೆಯುತ್ತಿದ್ದಂತೆಯೇ ನೆನಪಾದವನು, ಎಂಟು ವರ್ಷಗಳಿಂದ ಬ್ರಾಮ್ಟನ್, ಟೋರಾಂಟೋಗಳಲ್ಲಿ ಪ್ಯಾರಾ ಲಿಗಲ್ ಆಗಿ ಲಾಯರ್ ಕೆಲಸ ನಿರ್ವಹಿಸುತ್ತಿರುವ, ನಮ್ಮ ಹಿರಿಯ ವಕೀಲ ಸುಬ್ಬರಾಯಪ್ಪನವರ ಮಗ ಎಂ.ಎಸ್. ಸತೀಶ್ ಅರ್ಥಾತ್ ಈಗ ಸತೀಶ್ ಮಂಡಲಗಿರಿ. ಲೋಕಲ್ Phone ನಲ್ಲಿ ಸಿಕ್ಕವನೇ, ಒಂದರೆಕ್ಷಣ "ಯಾರು ನಟರಾಜ?" ಎಂದವನೇ ನಾವಿಬ್ಬರೂ ೯೩-೯೪ರಲ್ಲಿ ನಡೆಸಿದ ಕೇಸನ್ನು ನೆನಪಿಸಿಕೊಂಡಿದ್ದ. ಮತ್ತೆರಡು ಗಂಟೆಗಳಲ್ಲಿ ತನ್ನ ಕಾರಿನಲ್ಲಿ ಸತೀಶ್ ಹಾಜರ್. ಅವನೊಡನೆ ಆ ದಿನ ಬ್ರಾಮ್ಟನ್ ನಗರದಲ್ಲಿರುವ ಲಘು ವ್ಯವಹಾರದ ನ್ಯಾಯಾಲಯ (Small Claims Tribunal), ಮ್ಯಾಜಿಸ್ಟ್ರೇಟ್ ಕೋರ್ಟ್, ಸುಪೀರಿಯರ್ ಕೋರ್ಟ್ (ನಮ್ಮ ಹೈಕೋರ್ಟ್ ಸಮಾನ) ಗಳಿಗೆ ಭೇಟಿ. ಕೇಸ್ ಫೈಲಿಂಗ್ ಬಗ್ಗೆ ಈ ಮಧ್ಯೆ ಸತೀಶನ ನಿರೂಪಣೆ ನಡೆಯಿತು.

Para Legal ಎಂಬ ಪದವನ್ನು ನಾನು ಕೇಳಿದ್ದು ಜಾನ್ ಗ್ರಿಷಾಂನ ಕಾದಂಬರಿಗಳಲ್ಲಿ. ಅಮೆರಿಕದಲ್ಲಿ ಪ್ಯಾರಾ ಲೀಗಲ್‌ಗಳು ನ್ಯಾಯಾಲಯಗಳ ಕಲಾಪಗಳಲ್ಲಿ ಭಾಗವಹಿಸುವಂತಿಲ್ಲ. ಆದರೆ ಕೆನಡಾದಲ್ಲಿ ಅವರು ಲಘು ವ್ಯವಹಾರದ ನ್ಯಾಯಾಲಯಗಳಲ್ಲಿ ವಕೀಲರಾಗಿ ಕಾರ್ಯ ನಿರ್ವಹಿಸಬಹುದಾಗಿದೆ. ಸಂಧಾನದಲ್ಲಿ, ವಿಚಾರಣೆಯಲ್ಲಿ, ವಾದ ಮಂಡನೆಯಲ್ಲಿ ಹೀಗೆ ಎಲ್ಲಾ ಮಟ್ಟಗಳಲ್ಲೂ, ಹಿರಿಯ ಶ್ರೇಣಿ ನ್ಯಾಯಾಲಯಗಳಲ್ಲಿ ಪ್ರಾಕ್ಟೀಸ್ ಮಾಡಬೇಕೆಂದರೆ ಹಲವು ಪರೀಕ್ಷೆಗಳನ್ನು ಕೆನಡಾದಲ್ಲಿಯೇ ಪಾಸ್ ಮಾಡಬೇಕು. ನಮ್ಮ ಡಿಗ್ರಿ ಮತ್ತು LL.B. ಗಳ ಜತೆಗೆ ಸ್ಥಳೀಯ ಪರೀಕ್ಷೆಗಳನ್ನು ಯಶಸ್ವಿಯಾಗಿ ಪೂರೈಸಿದರೆ ಬ್ಯಾರಿಸ್ಟರ್ ಆಗಿ ಪರಿಪೂರ್ಣ ವಕೀಲ ವೃತ್ತಿ ನಡೆಸಬಹುದಾಗಿದೆ. ಸತೀಶನಂತೆಯೇ ಅಲ್ಲಿ ಶ್ರೀಮತಿ ಲತಾ ವಾಸನ್, ಶ್ರೀಮತಿ ರಮಾ ಎಂಬ ಪ್ಯಾರಾ ಲೀಗಲ್‌ಗಳ ಪರಿಚಯವೂ ಆಯಿತು. ಲತಾ ಇತ್ತೀಚೆಗೆ ೨೦೦೯ರಲ್ಲಿ ಕೆನಡಾ ಸೇರಿದ್ದಾರೆ. ಅವರೂ ಪರೀಕ್ಷೆ ತೆಗೆದುಕೊಳ್ಳುವ ತರಾತುರಿಯಲ್ಲಿದ್ದರು. ಸತೀಶ್ ಈಗಾಗಲೇ ಎರಡು ಪರೀಕ್ಷೆಗಳನ್ನು ಮುಗಿಸಿದ್ದು ಇನ್ನೆರಡು ಪರೀಕ್ಷೆ ಮುಗಿಸಬೇಕೆಂದು ಹೇಳುತ್ತಿದ್ದ.

ಲಘು ವ್ಯವಹಾರದ ನ್ಯಾಯಾಲಯದ ಮಿತಿ ೨೫,೦೦೦ ಡಾಲರ್‌ಗಳು. ಪ್ರತಿಯೊಂದು ಕೇಸ್‌ಗೂ ಕಟ್ಟಬೇಕಾದ ಕೋರ್ಟ್ ಫೀ ನಿಗದಿತ ೧೭೫ ಡಾಲರ್‌ಗಳು. ಒಂದು ಕೆನಡಿಯನ್ ಡಾಲರ್‌ಗೆ ಭಾರತದ ೪೩ ರೂಪಾಯಿಗಳು. ಪ್ರತಿವಾದಿಯು ತನ್ನ ಹೇಳಿಕೆಯನ್ನು ಹಾಕಬೇಕಾದರೆ ತಾನೂ ವಾದಿ ತೆತ್ತ ಅರ್ಧದಷ್ಟು ಕೋರ್ಟ್ ಫೀ ಕಟ್ಟಬೇಕಿರುತ್ತದೆ. ದಾವಾಗಳಲ್ಲಿ Xerox ಪ್ರತಿಗಳನ್ನು ಹಾಕಿದರೂ ನ್ಯಾಯಾಲಯಗಳು ನ್ಯಾಯವಾದಿಗಳ ಮೇಲಿನ ನಂಬುಗೆಯಲ್ಲಿ ಇವುಗಳನ್ನು ಅಧಿಕೃತ ಎಂದು ಪರಿಭಾವಿಸುತ್ತವೆ. ನ್ಯಾಯಾಧೀಶರಾದವರು ಎಷ್ಟೋ ಬಾರಿ ತಾತ್ಕಾಲಿಕವಾಗಿ ನೇಮಕಗೊಂಡವರೂ ಆಗಿರುತ್ತಾರೆ. ಜೂರಿ ಪದ್ಧತಿ ಕೆನಾಡದ ನ್ಯಾಯಾಲಯಗಳಲ್ಲಿ ಇನ್ನೂ ಜಾರಿಯಲ್ಲಿದೆ. ಕೇಸು ದಾಖಲಿಸಿ ಪ್ರತಿವಾದಿ ಹಾಜರಾಗಿ ತನ್ನ ಹೇಳಿಕೆ ಸಲ್ಲಿಸಿದೊಡನೆಯೇ ನ್ಯಾಯಾಧೀಶರು ಒಮ್ಮತದ ಒಡಂಬಡಿಕೆಗೆ ಕಾರ್ಯ ಸನ್ನದ್ಧರಾಗುತ್ತಾರೆ. ಒಮ್ಮತದ ತೀರ್ಪಿಗೆ ಮೊದಲ ಆದ್ಯತೆ.

ವಿಚಾರಣೆಗಳನ್ನು ನಿಗದಿತ ಅವಧಿಯಲ್ಲಿ ನಡೆಸುತ್ತಾರೆ. ಒಂದು ವಿಚಾರಣೆ ನಡೆಯುವಾಗ ಅದಕ್ಕೇ ಒಂದು ವೇಳೆ ನಿಗದಿ. ಹೀಗಾಗಿ ಒಮ್ಮೆಗೇ ನ್ಯಾಯಾಲಯದಲ್ಲಿ ಒತ್ತಡವಿರುವುದಿಲ್ಲ. ಇಲ್ಲಿರುವ ಪ್ರತಿಯೊಂದು ನ್ಯಾಯಾಲಯ ಕಟ್ಟಡಗಳಲ್ಲಿಯೂ ನೈರ್ಮಲ್ಯತೆಗೆ ಮೊದಲ ಆದ್ಯತೆ. ಯಾವ ನ್ಯಾಯಾಲಯದ ಕಟ್ಟಡಗಳಲ್ಲಿಯೂ ಕಾಫಿ, ತಿಂಡಿಗೆ ವ್ಯವಸ್ಥೆಯಿರುವುದಿಲ್ಲ. ನಾನು ನೋಡಿದ ಓಶ್ವಾ (Oshua) ಎಂಬ ನಗರದ ನ್ಯಾಯಾಲಯವು ಯಾವ ಪಂಚತಾರಾ ಹೋಟೆಲ್ ಕಟ್ಟಡಕ್ಕೂ ಕಡಿಮೆಯಿಲ್ಲ ಎನ್ನುವ ಹಾಗಿದೆ. ಒಂದೊಂದು ತೆರನ ಕೇಸುಗಳ ದಾಖಲಾತಿಗೂ ಒಂದೊಂದು ಪ್ರತ್ಯೇಕ ಕೌಂಟರ್. ಅಲ್ಲಿಯೇ ಹಿಯರಿಂಗ್ ದಿನಾಂಕಗಳನ್ನು ನೀಡಿ ಬಿಡುತ್ತಾರೆ. ಟೋಕನ್ ಪದ್ಧತಿಯಲ್ಲಿ ಫೈಲಿಂಗ್ ಮಾಡಲು ಕಾಯಬೇಕು. ನ್ಯಾಯಾಲಯಗಳ ಕಟ್ಟಡ ಒಳಹೊಕ್ಕಲು ಹೊರಗಿನವರಿಗೆ ಮುಕ್ತ ಪ್ರವೇಶವಿಲ್ಲ. ಭದ್ರತಾ ಸಿಬ್ಬಂದಿಯನ್ನು ದಾಟಿಯೇ ಒಳ ಹೊಕ್ಕಬೇಕು. ಭದ್ರತಾ ಬಾಗಿಲನ್ನು ದಾಟಿ ಒಳ ಹೋಗಬೇಕು.

ಗೆಳೆಯ ಸತೀಶ್‌ನಿಂದಾಗಿ ನಾನು ನ್ಯಾಯಾಲಯಗಳಿಗೆ ಭೇಟಿಯಿತ್ತದ್ದಲ್ಲದೆ ಹಲವಾರು ವಕೀಲರನ್ನು ಭೇಟಿಯಾಗುವ ಅವಕಾಶ ದೊರಕಿತು. ಇಲ್ಲಿನ ನ್ಯಾಯಾಲಯಗಳು ಅತ್ಯಂತ ಗಂಭೀರ ವಾತಾವರಣದಲ್ಲಿ ವಿಚಾರಣೆ ನಡೆಸುತ್ತವೆ. ಎಲ್ಲಾ ನ್ಯಾಯಾಲಯಗಳಲ್ಲಿಯೂ ಆಯಾ ಕೇಸುಗಳ ಪಕ್ಷಗಾರರು ಅವರವರ ವಕೀಲರೊಂದಿಗೆ ನ್ಯಾಯಾಧೀಶರ ಮುಂದೆ ಕುಳಿತು ಕೊಳ್ಳಲು ಸಮಾನ ಅವಕಾಶ ಹೊಂದಿದ್ದು ತಮ್ಮ ವಿವಾದಗಳಲ್ಲಿ ನಡೆಯುತ್ತಿರುವ ಎಲ್ಲ ಅಂಶಗಳನ್ನೂ ಪಾರದರ್ಶಕತೆಯಿಂದ ಗಮನಿಸಬಹುದಾಗಿರುತ್ತದೆ.

-ಮುಂದುವರಿಯುವುದು

## ಓದುಗರ ಓಲೆ

ಮಾನ್ಯರೆ,

ಮುಖ್ಯ ನ್ಯಾಯಮೂರ್ತಿ ಪಿ.ಡಿ. ದಿನಕರನ್ ಅವರ ಮೇಲೆ ಪ್ರಪ್ರಥಮವಾಗಿ ಆರೋಪ ಕೇಳಿ ಬಂದಾಗಿನಿಂದ ಅವರು ಇಲ್ಲಿಂದ ಸಿಕ್ಕಿಂಗೆ ವರ್ಗವಾಗಿ ಹೋಗುವವರೆಗಿನ ಅವಧಿಯ ನಿಮ್ಮ ಪತ್ರಿಕೆಯ ಪ್ರತಿ ಸಂಚಿಕೆಗಳನ್ನು ಇನ್ನೊಮ್ಮೆ ಕೂಲಂಕುಷವಾಗಿ ಓದಿದೆ. ಪತ್ರಿಕೆ ನಿಷ್ಪಕ್ಷಪಾತವಾಗಿ ಮತ್ತು ನಿರ್ಭೀತವಾಗಿ ತನ್ನ ನಿಲುವನ್ನು ಕಾಲದಿಂದ ಕಾಲಕ್ಕೆ ವ್ಯಕ್ತಪಡಿಸುತ್ತ ಬಂದದ್ದನ್ನು ಗಮನಿಸಿದೆ.

ಪತ್ರಿಕೆಯ ನಿಲುವಷ್ಟೆ ಅಲ್ಲ ಈ ಸಂಬಂಧದ ಸುದ್ದಿಯ ಪ್ರಕಟಣೆಯ ರೀತಿಯೂ ಸಮತೋಲನದಿಂದ ಕೂಡಿತ್ತು.

ಅಯೋಧ್ಯಾ ತೀರ್ಪಿನ ಸಂಬಂಧಿ ಸುದ್ದಿಗಳನ್ನು ನಿಮ್ಮ ಪತ್ರಿಕೆ ಹೇಗೆ ನಿಭಾಯಿಸುತ್ತದೆಂದು ನೋಡಲು ಕಾತರದಿಂದ ಕಾಯುತ್ತಿದ್ದೇನೆ.

*-ಟಿ. ತಿಪ್ಪೇಸ್ವಾಮಿ, ವಕೀಲರು, ಬೆಂಗಳೂರು*

## ಶೇರುಪೇಟೆ ವ್ಯವಹಾರ: ಇನ್ನು ಮೊಬೈಲ್ ಮೂಲಕವೂ ಸಾಧ್ಯ

ಶೇರುಪೇಟೆಯ ವ್ಯವಹಾರದಲ್ಲಿ ಭಾಗವಹಿಸಲು ಗ್ರಾಹಕರು ಇನ್ನು ಶೇರು ದಲ್ಲಾಳಿಗಳ ಕಛೇರಿಗೆ ಧಾವಿಸಬೇಕಿಲ್ಲ. ಸೆಕ್ಯೂರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಸೆಬಿ) ಗ್ರಾಹಕರ ಅನುಕೂಲಕ್ಕಾಗಿ ಮಾಡಿಕೊಟ್ಟಿರುವ ಹೊಸ ವ್ಯವಸ್ಥೆಯೊಂದರಲ್ಲಿ ಗ್ರಾಹಕರು ಮೊಬೈಲ್ ಅಥವಾ ಡೆಟಾ ಕಾರ್ಡ್ ಇರುವ ಲ್ಯಾಪ್‌ಟಾಪ್ ಕಂಪ್ಯೂಟರಿನ ಮುಖಾಂತರ ಈ ವ್ಯವಹಾರ ನಡೆಸಬಹುದಾಗಿದೆ.

ಈ ಸೇವೆ ಅರ್ಜಿ ಸಲ್ಲಿಸಿ ಅನುಮತಿ ಪಡೆದ ಗ್ರಾಹಕರಿಗೆ ಮಾತ್ರ ಲಭ್ಯ. ಶೇರುಪೇಟೆ ವ್ಯವಹಾರಕ್ಕೆ ಬಳಸುವ ತಂತ್ರಾಂಶ (Software) ಸೆಬಿಯ ಪರಿಶೋಧಕರಿಂದ ಪ್ರಮಾಣೀಕರಿಸಿದ್ದಾಗಿರಬೇಕು ಎಂದು ಸೆಬಿ ತನ್ನ ಸುತ್ತೋಲೆಯಲ್ಲಿ ತಿಳಿಸಿದೆ.

## ಶಿಕ್ಷಣದ ಹಕ್ಕು: ಸಂವಿಧಾನಿಕ ಪೀಠಕ್ಕೆ

ಶಿಕ್ಷಣವನ್ನು ಮೂಲಭೂತ ಹಕ್ಕಾಗಿಸುವ ಕಾಯ್ದೆಯ ಕೆಲ ಅನುಬಂಧಗಳನ್ನು ಸಾಂವಿಧಾನಿಕವಾಗಿ ವಾರ್ಜಿತವಲ್ಲವೆಂದು ಸಾರುವಂತೆ ಕೋರುವ ಕೆಲವು ಅರ್ಜಿಗಳು ಸರ್ವೋಚ್ಚ ನ್ಯಾಯಾಲಯದ ದ್ವಿ ಸದಸ್ಯರ ಪೀಠದ ಮುಂದೆ ಬಂದಾಗ, ನ್ಯಾಯಾಲಯ ಅವುಗಳನ್ನು ಐದು ನ್ಯಾಯಾಧೀಶರ ಸಾಂವಿಧಾನಿಕ ಪೀಠಕ್ಕೆ ವರ್ಗಾಯಿಸಿದೆ.

ಅನಿವಾರ್ಯ ಕಾರಣಗಳಿಂದ ಈ ತಿಂಗಳು 'ಪ್ರಚಲಿತ' ಇರುವುದಿಲ್ಲ. ಸಹಕಾರವಿರಲಿ. -ಸಂ.

# ಕಾಲ ಬದ್ಧ ಕರಾರಿಗೆ ಪಕ್ಷಗಾರರ ಬದ್ಧತೆ

ವಿಶು ಖಾಸಗಿ ಸಂಸ್ಥೆಯ ನೌಕರ. ಕಲಾಳನ್ನು ಮದುವೆ ಮಾಡಿಕೊಂಡು ನಂತರ ಒಂದು ಹೆಣ್ಣುಮಗು ಜನಿಸಿ, ಸುಖಿ ದಾಂಪತ್ಯ ನಡೆಸುತ್ತಿದ್ದ. ಕೆಲವೇ ವರ್ಷಗಳಲ್ಲಿ ಬಡ್ತಿ ಪಡೆದು ಮ್ಯಾನೇಜರ್ ಆದ. ಹೆಚ್ಚಿನ ಸಂಬಳ ಮತ್ತು ಸವಲತ್ತುಗಳು, ವಿಶುವನ್ನು ಸ್ವಲ್ಪಮಟ್ಟಿಗೆ ಅಡ್ಡ ದಾರಿಗೆ ಎಳೆದವು. ಕಛೇರಿಯಿಂದ ಮೀಟಿಂಗ್ ನೆಪದಲ್ಲಿ, ಮನೆಗೆ ತಡವಾಗಿ ಬರತೊಡಗಿದ. ಸಹೋದ್ಯೋಗಿಗಳ ಸಹವಾಸದಿಂದ, ಕುಡಿತದ ಚಟ ಪ್ರಾರಂಭಿಸಿಕೊಂಡು ಕುಡಿತದ ಅಮಲಿನಲ್ಲಿ ಹೆಂಡತಿ, ಮಗಳನ್ನು ಅವಾಚ್ಯ ಶಬ್ದ ಬಳಸಿ ಬೈಯ್ಯುವುದಕ್ಕೆ ಮತ್ತು ಹೊಡೆಯುವುದಕ್ಕೆ ಪ್ರಾರಂಭಿಸಿದ. ವಿಶುನ ತಾಯಿಗೆ ಸೊಸೆ ಮತ್ತು ಮೊಮ್ಮಗಳ ಮೇಲೆ ಪ್ರೀತಿ ವಿಶ್ವಾಸವಿದ್ದರೂ ತನ್ನ ಒಬ್ಬನೇ ಮಗನನ್ನು ಎದುರು ಹಾಕಿಕೊಳ್ಳಲು ಆಕೆ ಸಿದ್ಧಳಿರಲಿಲ್ಲ.

**Just ಮಾತ್ ಮಾತಲ್ಲಿ...**

> ಒಮ್ಮೆ ಯೋಚಿಸಿ, ಪಕ್ಷಗಾರರು ತಮ್ಮ ದಾವಾದಲ್ಲಿ ಕೇಳಿರುವ ಪರಿಹಾರಕ್ಕಿಂತ ಹೆಚ್ಚಿನದನ್ನು ಬೇರೆಯದನ್ನು, ಪಡೆಯಲು ಮಧ್ಯಸ್ಥಿಕೆಯಲ್ಲಿ ಮಾತ್ರ ಸಾಧ್ಯ. ಅಲ್ಲವೆ?

ಮನೆಯಲ್ಲಿನ ಪರಿಸ್ಥಿತಿ ಗಂಭೀರವಾಗಿ, ಬೇರೆ ಮಾರ್ಗೋಪಾಯಗಳಿಲ್ಲದೇ ಕಲಾ ಮಗಳೊಂದಿಗೆ ಮನೆ ಬಿಟ್ಟು ನಗರದ ಇನ್ನೊಂದೆಡೆ ಇರುವ ತನ್ನ ಅಣ್ಣನೊಡನೆ ವಾಸಿಸಲು ಹೋದಳು. ಅಲ್ಲದೇ ಮಗಳ ಶಾಲೆಯನ್ನು ಮತ್ತು ತನ್ನ ಸಂಚಾರಿ ದೂರವಾಣಿಯನ್ನು ಬದಲಾಯಿಸಿ, ಗಂಡನೊಂದಿಗೆ ಸಂಪರ್ಕವನ್ನು ಸಂಪೂರ್ಣವಾಗಿ ಕಡಿದು ಕೊಂಡಳು. ವಿಶುಗೆ ತನ್ನ ಮುದ್ದು ಮಗಳ ನೆನಪಾಗಿ, ಅವಳ ಶಾಲೆಯ ಬಳಿ ಹೋಗಿ ಭೇಟಿ ಮಾಡಲು ಪ್ರಯತ್ನಿಸಿದ. ಹಾಗಾಗಿ ಸ್ಥಿತಿ ಪ್ರಕೋಪಕ್ಕೆ ಹೋಗಿ, ಪೊಲೀಸರ ಆಗಮನವಾಗುವಷ್ಟು ಗಂಭೀರವಾಯಿತು.



ಎಸ್.ಎನ್. ಪ್ರಶಾಂತ ಚಂದ್ರ,
snpchandra@gmail.com

ಕಲಾ ಜೀವನೋಪಾಯಕ್ಕಾಗಿ ಕೆಲಸಕ್ಕೆ ಸೇರಿ ಸ್ವಾವಲಂಬಿ ಜೀವನ ನಡೆಸಲು ಪ್ರಯತ್ನಿಸಿದಳು. ಹಣದ ಅವಶ್ಯಕತೆ ಹೆಚ್ಚಾಗಿ ಸಲಹೆ ಮೇರೆಗೆ ತಿಂಗಳಿಗೆ ರೂ. ೨೦,೦೦೦/- ಜೀವನಾಂಶ ಕೋರಿ ಕೌಟುಂಬಿಕ ನ್ಯಾಯಾಲಯದಲ್ಲಿ ಅರ್ಜಿ ಹಾಕಿದಳು. ವ್ಯಾಜ್ಯವನ್ನು ಮೊದಲಿನ ಹಂತದಲ್ಲಿಯೇ ಮಧ್ಯಸ್ಥಿಕೆಗೆ ವರ್ಗಾಯಿಸಲಾಯಿತು.

ಈ ಮಧ್ಯೆ ಕಲಾಳ ವರ್ತನೆಯಿಂದ ಕೋಪಗೊಂಡ ವಿಶು ಅವಳ ಮನೆಗೆ ದಾಳಿ ಮಾಡಿ, ಹಿಂದೆ ಬಾ. ಮಗುವನ್ನು ಕೊಡು ಎಂದು ಬೇಡಿ ಅವಳು ಒಪ್ಪದೇ ಇದ್ದಾಗ, ಕೆಟ್ಟದಾಗಿ ವರ್ತಿಸಿದ. ಪ್ರಕರಣದಲ್ಲಿ ಮತ್ತೆ ಪೊಲೀಸರ ಆಗಮನವಾಯಿತು. ಈ ಹಿನ್ನೆಲೆಯಲ್ಲಿ ಸಂಘರ್ಷ ಉಲ್ಬಣಗೊಂಡು ಮಧ್ಯಸ್ಥಿಕೆ ಪ್ರಕ್ರಿಯೆ ಸುಗಮವಾಗಿ ಸಾಗಲಿಲ್ಲ. ತನ್ನ ಗಂಡನ ಇತ್ತೀಚಿನ ವರ್ತನೆಯಿಂದ ವಿಚ್ಛೇದನೆಯೇ ಸರಿಯಾದ ಪರಿಹಾರ ಹಾಗೂ ಮಗಳ ಸುಪರ್ದಿಯನ್ನು ನನಗೆ ಕೊಡಬೇಕು ಮತ್ತು ಶಾಶ್ವತ ಜೀವನಾಂಶವನ್ನು ಕೊಡಿಸಿ ಎಂಬುವುದು ಅವಳ ಬೇಡಿಕೆ ಆಗಿತ್ತು. ವಿಶು ಮೊದಲಿಗೆ ಆಕ್ರೋಶದಿಂದೇ ತನ್ನ ಮಗಳ ಮುಖ ನೆನಪಾದಾಗ, ತನ್ನ ತಪ್ಪಿನ ಅರಿವಾಗುತ್ತಿತ್ತು. ಜೀವನಾಂಶವನ್ನು ಕೊಡಲು ಆತನಿಗೆ ಸುತರಾಂ ಮನಸ್ಸಿರಲಿಲ್ಲ. ಮನೆಗೆ ಹಿಂದಿರುಗಿದಲ್ಲಿ ಅವರಿಬ್ಬರ ಯೋಗಕ್ಷೇಮವನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆಂದು ಮುಂದೆ ಈ ರೀತಿಯ ಘಟನೆಗಳಿಗೆ ಅವಕಾಶ ಮಾಡಿಕೊಡುವುದಿಲ್ಲವೆಂದು ನನ್ನನ್ನು ನಂಬಿ ಎಂಬುವುದು ಅವನ ನಿಲುವಾಗಿತ್ತು.

ಆದರೆ, ಏಕೋ ಏನೋ ಕಲಾಳಿಗೆ, ತನ್ನ ಗಂಡನ ಮಾತಿನಲ್ಲಿ ಸಂಪೂರ್ಣ ನಂಬಿಕೆ ಇರಲಿಲ್ಲ. ಮತ್ತೆ ಈ ಘಟನೆಗಳು ಮರುಕಳಿಸಿದರೆ ನನ್ನ ಸ್ಥಿತಿ ಏನು? ಎನ್ನುವುದು ಅವಳ ಆತಂಕವಾಗಿತ್ತು. ಮೂಲತಃ ಎರಡು ಪಕ್ಷಗಾರರ ಅಪೇಕ್ಷೆಗಳು ಬೇರೆ ಬೇರೆಯಾಗಿದ್ದುದ್ದರಿಂದ ಮಧ್ಯಸ್ಥಿಕೆ ಪ್ರಯತ್ನ ಮುರಿದು ಬೀಳುವ ಸಾಧ್ಯತೆಗಳೇ ಜಾಸ್ತಿ ಇದ್ದವು. ಬೇರೆ ಬೇರೆ ಹಂತದ ಮಾತುಕತೆಯ ನಂತರ ಮತ್ತು ಕಲಾಳ ಅರ್ಜಿಯಲ್ಲಿರುವ ನಿಯಮಿತ ಕೋರಿಕೆಯ ಹಿನ್ನೆಲೆಯಲ್ಲಿ ಪಕ್ಷಿಗಾರರು ಮನಃಪೂರ್ವಕವಾದ ಒಂದು ಕಾಲಬದ್ಧ, ಮತ್ತು ಕ್ರಿಯಾತ್ಮಕ ಇತ್ಯರ್ಥವನ್ನು ಕಂಡುಕೊಂಡರು.

ಅದರಂತೆ ಕಲಾ ಮತ್ತು ವಿಶು ಮುಂದಿನ ೧೨ ತಿಂಗಳು ಹಿಂದಿನಂತೆಯೇ ಬೇರೆ ಬೇರೆಯಾಗಿ ಜೀವನ ನಡೆಸುವುದು, ಆ ಅವಧಿಯಲ್ಲಿ ಕಲಾ ಮತ್ತು ಮಗುವಿಗೆ ವಿಶು ಮಾಸಿಕ ೧೦,೦೦೦/- ರೂಪಾಯಿಗಳನ್ನು ಜೀವನಾಂಶ ಕೊಡುವುದು. ಮಗುವಿನ ವಿದ್ಯಾಭ್ಯಾಸದ ಜವಾಬ್ದಾರಿ ಮತ್ತು ಸುಪರ್ದಿಯನ್ನು ಕಲಾಳೇ ನೋಡಿಕೊಳ್ಳತಕ್ಕದ್ದು. ವಿಶುವಿಗೆ ಮಗಳನ್ನು ನೋಡಲು ನಿಗದಿತ ದಿವಸಗಳಲ್ಲಿ ಮಾತ್ರ ಅವಕಾಶ ನೀಡುವುದು, ತಮ್ಮಿಬ್ಬರ ವೈವಾಹಿಕ ಜೀವನದ ಮುಂದಿನ ದಿಸೆಯನ್ನು ನಿರ್ಧರಿಸುವ ವಿವೇಚನೆ ದಂಪತಿಗಳೇ ಕಾಯ್ದಿರಿಸಿಕೊಂಡು ಮುಂದಿನ ೧೨ ತಿಂಗಳೊಳಗೆ ಅದಕ್ಕೆ ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳಲು ಒಪ್ಪಿಕೊಂಡರು.

ಒಮ್ಮೆ ಯೋಚಿಸಿ, ಈ ರೀತಿಯ ಇತ್ಯರ್ಥಗಳು, ಮಧ್ಯಸ್ಥಿಕೆಯನ್ನು ಹೊರತುಪಡಿಸಿ ನ್ಯಾಯಾಲಯದಲ್ಲಿ ಕಂಡುಕೊಳ್ಳಲು ಸಾಧ್ಯವೆ?

ಕಲಾಳ ಕೋರಿಕೆ ಕೇವಲ ಜೀವನಾಂಶಕ್ಕೆ ಮಾತ್ರ ಸೀಮಿತವಾಗಿತ್ತು. ವಿಚ್ಛೇದನ, ಶಾಶ್ವತ ಜೀವನಾಂಶ, ಮಗುವಿನ ಸುಪರ್ದಿ ಕೋರಿಕೆಗಳನ್ನು ಈ ಹಂತದಲ್ಲಿ ಸೇರ್ಪಡೆ ಮಾಡಲು ಸಾಧ್ಯವಿರಲಿಲ್ಲ. ವಿಶುಗೆ ಯಾವುದಕ್ಕೂ ಒಪ್ಪಿಗೆ ಇರಲಿಲ್ಲ. ತಾನು ಬದಲಾಗಿದ್ದರಿಂದ, ಆಕೆಗೆ ವಾಪಾಸು ಬರಲು ಏನು ತೊಂದರೆ ಎಂಬುವುದೇ ಅವನ ವಾದವಾಗಿತ್ತು. ಆದರೆ ಕಲಾಳಿಗೆ ವಿಶು ಮೇಲೆ ಸಂಪೂರ್ಣ ನಂಬಿಕೆ ಮೂಡಿರಲಿಲ್ಲ. ಹಿಂದಿನ ಕಹಿ ಘಟನೆಗಳನ್ನು ಬದಿಗಿಟ್ಟು, ಗಂಡನ ಅಪೇಕ್ಷೆಯಂತೆ ಮತ್ತೆ ಕೂಡಿ ಬಾಳುವ ಯೋಚನೆಗೆ ಮನಸ್ಸನ್ನು ತೆರೆದಿದ್ದಳು.

ಈ ರೀತಿ ಕಾಲಬದ್ಧ ಕರಾರಿನಿಂದ ಎರಡೂ ಪಕ್ಷದವರಿಗೆ ಸಮಯಾವಕಾಶ ದೊರೆಯಿತು. ತನ್ನ ಆಶ್ವಾಸನೆ, ಭರವಸೆಯಂತೆ ತನ್ನಲ್ಲಾದ ಬದಲಾವಣೆಯನ್ನು ಪ್ರದರ್ಶಿಸಲು ಅಥವಾ ಕಲಾಳ ಪ್ರಕಾರ ವಿಶುವಿನಲ್ಲಿ ಬದಲಾವಣೆ ಕಂಡು ಬರದಿದ್ದಲ್ಲಿ, ತಮ್ಮಿಬ್ಬರ ವೈವಾಹಿಕ ಜೀವನ ಭವಿಷ್ಯದ ಬಗ್ಗೆ ಸೂಕ್ತ ನಿರ್ಣಯವನ್ನು ಕಂಡುಕೊಳ್ಳಲು, ಮಧ್ಯಸ್ಥಿಕೆ ಪ್ರಕ್ರಿಯೆ ಅವರಿಗೆ ಸಹಾಯಕವಾಯಿತು. ■

## ಆಡಿಸಿ ನೋಡು ಬೀಳಿಸಿ ನೋಡು ಉರುಳಿ ಹೋಗದು....

'ಹಿಂದೂ ಧರ್ಮವೊಂದು ಭದ್ರ ತಳದ ಬೊಂಬೆಯಿದ್ದಂತೆ, ಅದನ್ನು ಹೇಗೆ ಎತ್ತೆಸೆದರೂ, ತನ್ನ ನೇರ ಸ್ಥಾನವನ್ನು ಕಂಡುಕೊಳ್ಳುತ್ತದೆ.' ಹೀಗೆಂದು ಹಿಂದೂ ಧರ್ಮದ ಬಗ್ಗೆ ವ್ಯಾಖ್ಯೆ ಮಾಡಿದ್ದು, ನ್ಯಾ.ಡಿ.ಕೆ. ಜೈನ್ ಮತ್ತು ನ್ಯಾ. ಎಚ್.ಎಸ್. ದತ್ತು ಅವರಿದ್ದ ಸರ್ವೋಚ್ಚ ನ್ಯಾಯಾಲಯದ ದ್ವಿಸದಸ್ಯ ಪೀಠ.

ಸಂದರ್ಭ ಹೀಗಿದೆ: ಗೆದ್ದ ಎಐಎಡಿಎಂಕೆಯ ಎಂಎಲ್ಎ ಚಂದ್ರಾ ಅವರ ವಿರುದ್ಧ ಸೋತ ತಂಗಮುತ್ತು ಚುಣಾವಣಾ ತಕರಾರು ಅರ್ಜಿ ಸಲ್ಲಿಸಿ, ಚಂದ್ರಾ ಅನುಸೂಚಿತ ಜಾತಿಯವರಿಗೆ ಮೀಸಲಾಗಿರುವ ಕ್ಷೇತ್ರದಿಂದ ಗೆದ್ದಿದ್ದಾರೆ, ಆದರೆ ಅವರು ಹಿಂದೂ ಅಲ್ಲವೆ ಅಲ್ಲ. ಅವರೊಬ್ಬ ಕ್ರಿಶ್ಚಿಯನ್. ಹಾಗಾಗಿ ಅವರ ಆಯ್ಕೆಯನ್ನು ಅಸಿಂಧುಗೊಳಿಸಬೇಕೆಂದು ಕೋರಿದರು. ಮದ್ರಾಸ್ ಉಚ್ಚ ನ್ಯಾಯಾಲಯ ಚಂದ್ರಾ ಅವರ ಆಕ್ಷೇಪಣೆಯನ್ನು ತಳ್ಳಿ ಹಾಕಿ ಅವರ ಆಯ್ಕೆಯನ್ನು ಅನೂರ್ಜಿತಗೊಳಿಸಿತು.

ಮೇಲ್ಮನವಿ ಸರ್ವೋಚ್ಚ ನ್ಯಾಯಾಲಯದ ಮುಂದೆ ಬಂದಾಗ ಚಂದ್ರಾ 'ನಾನು ಹುಟ್ಟಿದ್ದು ಅನುಸೂಚಿತ ಜಾತಿಯ ಹಿಂದೂ ತಾಯಿ ಮತ್ತು ಕ್ರಿಶ್ಚಿಯನ್ ತಂದೆಯಿಂದ. ನನ್ನ ಬಾಲ್ಯದಲ್ಲಿ ತಂದೆ ನನ್ನನ್ನು ಮತ್ತು ನನ್ನ ತಾಯಿಯನ್ನು ತೊರೆದ. ನಂತರ ನಾವು ಹಿಂದೂ ಆಚಾರ ವಿಚಾರಗಳನ್ನೆ ಅನುಸರಿಸುತ್ತ ಬಂದಿದ್ದೇವೆ. ಅದಲ್ಲದೆ ನಾನು ಹಿಂದೂ ಆಗಿ ಮತಾಂತರಗೊಂಡಿದ್ದೇನೆ' ಎಂದರು.

ಎರಡೂ ಪಕ್ಷಗಳ ವಾದ ವಿವಾದಗಳನ್ನು ಪರಿಶೀಲಿಸಿ ತೀರ್ಪು ಬರೆದ ನ್ಯಾಯಾಲಯ, ಮತಾಂತರವನ್ನು ಸಾಬೀತು ಪಡಿಸಲು ಎರಡು ಅಂಶಗಳು ಅತ್ಯವಶ್ಯಕವಾಗಿರಬೇಕು. ಮೊದಲನೆಯದಾಗಿ, ಮತಾಂತರದ ಶಾಸ್ತ್ರದ ಆಚರಣೆಗೆ ಮತ್ತು ಎರಡನೆಯದಾಗಿ ಮತಾಂತರಿಯನ್ನು ಆ ಧರ್ಮದ ಜನ ತಮ್ಮವನ್ನಾಗಿ ಸ್ವೀಕರಿಸಿ ತಮ್ಮ ಸಮಾಜದ ಭಾಗವಾಗಿ ಪರಿಗಣಿಸಿದ್ದಕ್ಕೆ ಸಾಕ್ಷಾಧಾರಗಳಿರಬೇಕು ಎಂದಿದೆ. ಈ ಪ್ರಕರಣದಲ್ಲಿ ಎರಡು ಸಂದರ್ಭಗಳೂ ಚಂದ್ರ ಅವರ ಪರ ಇದ್ದಿದ್ದರಿಂದ ಸರ್ವೋಚ್ಚ ನ್ಯಾಯಾಲಯ ಅವರ ಆಯ್ಕೆಯನ್ನು ಎತ್ತಿ ಹಿಡಿದಿದೆ.

## ಅತ್ಯಾಚಾರಿಗೆ ಶಿಕ್ಷೆ: ಬಡತನ ವಿಶೇಷ ಕಾರಣವಲ್ಲ

ಅತ್ಯಾಚಾರಿಗೆ ಶಿಕ್ಷೆ ವಿಧಿಸಲು ಇರುವ ಭಾರತೀಯ ದಂಡ ಸಂಹಿತೆಯ ಸೆ. ೨೭೬ ನಲ್ಲಿನ ನಿಬಂಧನೆಯೊಂದು ನ್ಯಾಯಾಲಯದ ಹಲವು ರೀತಿಯ ಮಿಮಾಂಸೆ (Interpretation) ಗೆ ಕಾರಣವಾಗಿದೆ.

ಸೆ. ೨೭೬ರಂತೆ ಅತ್ಯಾಚಾರಿಗೆ ಏಳು ವರ್ಷಕ್ಕೂ ಮೇಲ್ಪಟ್ಟು ಸೆರೆಮನೆ ವಾಸದ ಶಿಕ್ಷೆ ವಿಧಿಸಬಹುದಾಗಿದೆ. ಆದರೆ ಅದೆ ನಿಬಂಧನೆಯ ಉಪನಿಯಮದಂತೆ 'ನ್ಯಾಯಾಲಯ ಸಾಕಷ್ಟು ಮತ್ತು ವಿಶೇಷ ಕಾರಣಗಳಿದ್ದಲ್ಲಿ ಶಿಕ್ಷೆಯ ಪ್ರಮಾಣವನ್ನು ಏಳು ವರ್ಷಗಳಿಗಿಂತ ಕಡಿಮೆ ಅವಧಿಗೆ ನಿಗದಿ ಪಡಿಸಬಹುದು'. ಸಾಕಷ್ಟು ಮತ್ತು ವಿಶೇಷ ಕಾರಣಗಳು ಯಾವುದು ಎಂಬುದರ ಬಗ್ಗೆಯ ಹಲವು ರೀತಿಯ ಮಿಮಾಂಸೆಗಳಿವೆ. ಇತ್ತೀಚೆಗೆ ಬಾಂಬೆ ಉಚ್ಚ ನ್ಯಾಯಾಲಯದ ದ್ವಿ ಸದಸ್ಯ ಪೀಠವೊಂದು ಅಪರಾಧಿಯ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆ ಶಿಕ್ಷೆಯನ್ನು ಕಡಿತಗೊಳಿಸಲು ಸಕಾರಣಗಳಲ್ಲ ಎಂದಿದೆ. ಆಪಾದಿತ ತಾನು ಕಡು ಬಡವನಾಗಿರುವುದರಿಂದ ಶಿಕ್ಷೆಯ ಪ್ರಮಾಣವನ್ನು ಕಡಿತಗೊಳಿಸಲು ಕೇಳಿಕೊಂಡಿದ್ದ.

## ದಂಡು ಪಾಳ್ಯದ ೧೦ ಜನರಿಗೆ ಮರಣದಂಡನೆ

೨೦೦೦ನೆ ಇಸವಿಯ ಮೊದಲಭಾಗದಲ್ಲಿ ಬೆಂಗಳೂರಿನಲ್ಲಿ ಕುಖ್ಯಾತರಾಗಿದ್ದ ದಂಡು ಪಾಳ್ಯದ ಪಾತಕಿಗಳ ಪೈಕಿ ೧೦ ಜನರಿಗೆ ಬೆಂಗಳೂರಿನ ವಿಶೇಷ ಸತ್ರ ನ್ಯಾಯಾಲಯವೊಂದು ಮರಣದಂಡನೆ ವಿಧಿಸಿ ತೀರ್ಪು ನೀಡಿದೆ. ಕೊಲೆ, ಸುಲಿಗೆಗಳಂತಹ ಹೇಯ ಅಪರಾಧಗಳ ಆಪಾದನೆ ಈ ಆಪಾದಿತರ ಮೇಲಿತ್ತು. ಆಪಾದಿತರ ರಾಕ್ಷಸೀಯ ವರ್ತನೆಯನ್ನು ಗಮನಿಸಿ ಸರಕಾರ ಸತ್ರ ನ್ಯಾಯಾಲಯವನ್ನು ಪರಪ್ಪನ ಅಗ್ರಹಾರದ ಸೆರೆಮನೆಯಲ್ಲಿಯೆ ಸ್ಥಾಪಿಸಿತ್ತು.

ಈಗ ದಂಡ ಪ್ರಕ್ರಿಯಾ ಸಂಹಿತೆಯ ಸೆ ೩೬೬ರಡಿ ಈ ಮರಣ ದಂಡನೆಯ ಆಜ್ಞೆ ಉಚ್ಚ ನ್ಯಾಯಾಲಯದ ದ್ವಿಸದಸ್ಯ ಪೀಠದಿಂದ ಅನುಮೋದನೆಗೊಳ್ಳಬೇಕು.

ಪ್ರಕಾಶಕರು : ಎಸ್. ಎನ್. ಪ್ರಶಾಂತಚಂದ್ರ, ಲಹರಿ ವಕೀಲರ ವೇದಿಕೆ, ನಂ. ೨೯೮೦, 'ಲಕ್ಷ್ಮೀದೀಪ', ೧೭ನೇ ಅಡ್ಡರಸ್ತೆ, ಬನಶಂಕರಿ ೨ನೇ ಹಂತ, ಬೆಂಗಳೂರು-೫೬೦ ೦೭೦
ಮುದ್ರಣ : ವೀ ಕೇ ಪ್ರಿಂಟರ್ಸ್ & ಪಬ್ಲಿಷರ್ಸ್, ನಂ. ೩೯೬, ಊಗಾ ಕಾಂಪ್ಲೆಕ್ಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-೫೬೦ ೦೦೩. ಸಂಪರ್ಕಿಸಿ : aravindneglur@gmail.com
KARBIL 01707 / 10 /1/2009-TC MAG/(2)/LR/PRB/70/10-11 ಸಂಪಾದಕರು : ಅರವಿಂದ ಎಂ. ನೆಗಳೂರ

# ಲಹರಿ ಸಂವಾದ

ಸಂಪುಟ – ೧ | ಶ್ರೀ ವಿಕೃತಿ ನಾಮ ಸಂವತ್ಸರ ಆಶ್ವೀನ – ಕಾರ್ತಿಕ | ಸಂಚಿಕೆ – ೭


ಒಳಗೇನಿದೆ?


ಪುಟ ೧ : ಉಪ್ಪಿನಕಾಯಿ, ಸುದ್ದಿ
ಪುಟ ೨ : ಲಹರಿ, ನಿಮ್ಮೊಂದಿಗೆ
ಪುಟ ೩ : ಪ್ರವಾಸ ಕಥನ, ಸುದ್ದಿ
ಪುಟ ೪ : ಸುದ್ದಿ ಮತ್ತು ಅಂಕಣ


## ಲಹರಿ ಓದುಗರಿಗೆ ಕರ್ನಾಟಕ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು

## ಉಪ್ಪಿನಕಾಯಿ

ತನ್ನ ಅಂತರ್ಜಾಲ ತಾಣ www.bjp.com ಅನ್ನು ಕಾಂಗ್ರೆಸ್ ಪಕ್ಷ ವಿರೂಪಗೊಳಿಸಿ ತಾಣಕ್ಕೆ ಭೇಟಿ ನೀಡುವ ಅಂತರ್ಜಾಲಿಗರನ್ನು ಕಾಂಗ್ರೆಸ್ ಪಕ್ಷದ ಅಂತರ್ಜಾಲ ತಾಣಕ್ಕೆ ಭೇಟಿ ನೀಡುವಂತೆ ಮಾಡಿದೆ ಎಂದು ಬಿ.ಜೆ.ಪಿ. ಆರೋಪಿಸಿದೆ. ಕಾಂಗ್ರೆಸ್ ಇದನ್ನು ನಿರಾಕರಿಸಿದೆ.

ರಾಮಜನ್ಮಭೂಮಿ – ಬಾಬರಿ ಮಸೀದಿ ವಿವಾದವನ್ನು ನಿರ್ಧರಿಸಿರುವ ಅಲಹಾಬಾದ್ ಉಚ್ಚ ನ್ಯಾಯಾಲಯ 'ನಂಬಿಕೆ'ಯ ಆಧಾರದ ಮೇಲೆ ತೀರ್ಪು ನೀಡಿಲ್ಲ. ಬದಲಾಗಿ ಇದು ರಾಮನ ಜನ್ಮಸ್ಥಳವೆಂಬ ಕೋಟ್ಯಾಂತರ ಜನರ 'ಗ್ರಹಿಕೆ' ಯನ್ನು ಮಾನ್ಯ ಮಾಡಿದೆ ಎಂದು ಹಿರಿಯ ವಕೀಲ ಅರುಣ ಜೇಟ್ಲಿ ವಿಶ್ಲೇಷಿಸಿದ್ದಾರೆ.

ಚುನಾವಣೆ ಘೋಷಣೆಯಾಗುವ ಸೂಚನೆ ಸಿಕ್ಕಕೂಡಲೇ ದೇಶದಾದ್ಯಂತ ತಲೆ ಎತ್ತುವ ರಾಜಕೀಯ ಪಕ್ಷಗಳನ್ನು ನಿಯಂತ್ರಿಸಲು ಚುನಾವಣಾ ಕಮೀಶನ್ ಹೊಸ ಮಾರ್ಗದರ್ಶಿ ಸೂತ್ರಗಳನ್ನು ಪ್ರಕಟಿಸಿದೆ.

ಅಕ್ಟೋಬರ್ ೧೫ರಿಂದ ಜಾರಿಗೆ ಬರುವ ಮಾರ್ಗದರ್ಶಿ ಸೂತ್ರದಂತೆ ನೋಂದಣಿಯಾಗ ಬಯಸುವ ರಾಜಕೀಯ ಪಕ್ಷ ಎರಡು ರಾಷ್ಟ್ರೀಯ ಮತ್ತು ಎರಡು ಸ್ಥಳೀಯ ಪತ್ರಿಕೆಗಳಲ್ಲಿ ಈ ಕುರಿತು ಜಾಹೀರಾತು ನೀಡಬೇಕು.

ನೋಂದಣಿಯನ್ನು ವಿರೋಧಿಸುವ ಯಾವುದೇ ವ್ಯಕ್ತಿ ಕಮೀಶನ್‌ಗೆ ತನ್ನ ಆಕ್ಷೇಪಣೆ ಸಲ್ಲಿಸಬಹುದು. ನಂತರ ಅರ್ಜಿ ಹಾಗೂ ಆಕ್ಷೇಪಣೆಯನ್ನು ಪರಿಗಣಿಸಿ ಕಮೀಶನ್ ನಿರ್ಧಾರ ತಳೆಯಲಿದೆ.

ಇದು ಜನತಾ ಪ್ರಾತಿನಿಧ್ಯ ಕಾಯ್ದೆ ೧೯೫೧ರ ಅಡಿಯಲ್ಲಿ ಹೊರಡಿಸಲಾದ ಅಧಿಸೂಚನೆ.

ಚುನಾವಣಾ ವ್ಯವಸ್ಥೆಯನ್ನು ಸುಧಾರಿಸುವ ಪ್ರಯತ್ನದ ಅಂಗವಾಗಿ ಎಲ್ಲ ರಾಜಕೀಯ ಪಕ್ಷಗಳು ತಮ್ಮ ಲೆಕ್ಕ ಪತ್ರಗಳನ್ನು ನಿಯಮಿತವಾಗಿ ತಪಾಸಣೆಗೊಳಪಡಿಸಬೇಕೆಂಬ ಚುನಾವಣಾ ಕಮೀಶನ್‌ನ ಸಲಹೆಯನ್ನು ಎಲ್ಲ ರಾಜಕೀಯ ಪಕ್ಷಗಳು ತಿರಸ್ಕರಿಸಿವೆ.

'ಅಪರಾಧ ಸಾಬೀತಾಗುವವರೆಗೂ ಪ್ರತಿ ವ್ಯಕ್ತಿಯೂ ನಿರಪರಾಧಿಯೇ. ನಮ್ಮನ್ನು ಅನಗತ್ಯವಾಗಿ ಸಂಶಯಿಸುವ ಅಗತ್ಯವಿಲ್ಲ.' ಇದು ಕಮೀಶನ್‌ನ ಸಲಹೆಯನ್ನು ತಿರಸ್ಕರಿಸಿರುವ ರಾಜಕೀಯ ಪಕ್ಷಗಳ ನಿಲುವಾಗಿದೆ.

ಸೆಪ್ಟೆಂಬರ್ ೨೯ರಂದು ಅನುಗ್ರಹ ನಾರಾಯಣ ತಿವಾರಿ, ನಿವೃತ್ತ I.A.S. ಅಧಿಕಾರಿ ಮಾಹಿತಿ–ಹಕ್ಕಿನ ಕಾಯ್ದೆ ಅಡಿಯಲ್ಲಿ ಸ್ಥಾಪಿತಗೊಂಡ ಮುಖ್ಯ ಮಾಹಿತಿ ಕಮೀಶನರ್ ಎಂದು ನಿಯುಕ್ತಗೊಂಡಿದ್ದಾರೆ. ಅವರ ಸೇವಾವಧಿ ಇದೇ ಡಿಸೆಂಬರ್ ೧೯ರಂದು ಮುಗಿಯಲಿದೆ.

ತಮಗೆ ಒಗ್ಗದ ವಿಚಾರಗಳನ್ನೊಳಗೊಂಡಿರುವ ಪುಸ್ತಕಗಳನ್ನು ನಿಷೇಧಿಸುವ ಸರಕಾರದ ಪ್ರವೃತ್ತಿ ಭಾರತಕ್ಕೆ ಮಾತ್ರ ಸೀಮಿತವಾಗಿಲ್ಲ. ಜಗತ್ತಿನಾದ್ಯಂತ ಹಲವು ಸರಕಾರಗಳು ವಿರೋಧವನ್ನು ಹತ್ತಿಕ್ಕಲು ಈ ಉಪಾಯವನ್ನು ಬಳಸಿಕೊಳ್ಳುತ್ತವೆ.

ಪ್ರತಿಯಾಗಿ ವಿರೋಧ ವ್ಯಕ್ತಪಡಿಸುವ ಹಕ್ಕನ್ನು ಜೀವಂತವಾಗಿ ಇಡಬೇಕೆನ್ನುವ ವಿಶ್ವದಾದ್ಯಂತದ ಹಲವು ಸಂಘಟನೆಗಳು ಪ್ರತಿ–ವರ್ಷದಂತೆ ಈ ವರ್ಷವೂ ಸೆಪ್ಟೆಂಬರ್ ೨೫ ಅಕ್ಟೋಬರ್ ೨ ರ ವರೆಗಿನ ಕಾಲವನ್ನು ನಿಷೇಧಿತ ಪುಸ್ತಕಗಳ ಸಪ್ತಾಹವನ್ನು ಆಚರಿಸಿದವು. ಪುಸ್ತಕ ಪ್ರದರ್ಶನ ಮತ್ತು ವಾಚನ ಈ ಕಾರ್ಯಕ್ರಮದ ವೈಶಿಷ್ಟ್ಯ.

ಮಹದಾಯಿ ನದಿಗೆ ಅಡ್ಡಲಾಗಿ ಕರ್ನಾಟಕ ನಿರ್ಮಿಸುತ್ತಿರುವ ಕಳಸಾ–ಬಂಡೂರಿ ನಾಲಾ ವಿಚಾರ ಕಾನೂನಿನ ತೊಡಕಿಗೆ ಸಿಲುಕಿರುವದು ಖಚಿತವಾಗಿದೆ. ಈ ನದಿನೀರಿನ ಹಂಚಿಕೆಯ ವಿವಾದವನ್ನು ಟ್ರಿಬ್ಯುನಲ್ಲಿಗೆ ಒಪ್ಪಿಸುವಂತೆ ಕೇಂದ್ರ ಸರಕಾರಕ್ಕೆ ಸರ್ವೋಚ್ಚ ನ್ಯಾಯಾಲಯ ನಿರ್ದೇಶನ ನೀಡಿದೆ.

## ತಿಂಗಳ ಸುದ್ದಿ

### ವಿವಾಹೇತರ ಸಂಬಂಧಗಳಲ್ಲಿ ಜೀವನಾಂಶ ಇಲ್ಲ : ಸ.ನ್ಯಾ.

ವಿವಾಹೇತರ ಸಂಬಂಧಗಳಲ್ಲಿ ಗಂಡು ಹೆಣ್ಣಿನ ಸಂಬಂಧ ಮುರಿದು ಬಿದ್ದರೆ ಅಂಥ ಹೆಣ್ಣು ಮಹಿಳಾ ದೌರ್ಜನ್ಯ ವಿರೋಧಿ ಕಾಯಿದೆಯಡಿ ಪರಿಹಾರ ಕೇಳಲು ಬರುವುದಿಲ್ಲವೆಂದು ಸರ್ವೋಚ್ಚ ನ್ಯಾಯಾಲಯ ಸ್ಪಷ್ಟಪಡಿಸಿದೆ.

ವಿವಾಹೇತರ ಸಂಬಂಧಗಳಲ್ಲಿ ಗಂಡು ಹೆಣ್ಣು ಜೊತೆಯಾಗಿದ್ದ ಮಾತ್ರದಿಂದ ಅದು 'ವಿವಾಹ' ಅಥವಾ 'ವಿವಾಹದಂತಹ' ಸಂಬಂಧ ಎಂದು ಹೇಳಲು ಬರುವುದಿಲ್ಲವೆಂದು ಸರ್ವೋಚ್ಚ ನ್ಯಾಯಾಲಯ ತನ್ನ ೨೧ ಅಕ್ಟೋಬರ್‌ನ ತೀರ್ಪಿನಲ್ಲಿ ಸ್ಪಷ್ಟಪಡಿಸಿದೆ.

ಈ ಕಾಯ್ದೆಯಡಿ ವಿವಾಹ ಅಥವಾ ವಿವಾಹದಂತಹ ಸಂಬಂಧಗಳು ಏರ್ಪಡಲು ಬೇಕಾದ ಅಂಶಗಳನ್ನು ಪೀಠ ಸ್ಪಷ್ಟಪಡಿಸಿದೆ. ಅದರಂತೆ ಈ ಕಾನೂನಿನಡಿ ಜೀವನಾಂಶ ಅಥವಾ ಇತರ ಪರಿಹಾರ ಕೇಳಲು ಹೆಂಗಸು ನಾಲ್ಕು ಅಂಶಗಳನ್ನು ಸಾಬೀತು ಪಡಿಸಬೇಕು.

- ಮೊದಲನೆಯದಾಗಿ, ಸಹಜೀವನ ನಡೆಸುವ ಗಂಡು ಹೆಣ್ಣು ಇಬ್ಬರೂ ತಮ್ಮನ್ನು ಪತಿ ಪತ್ನಿಯರೆಂದು ಸಮಾಜಕ್ಕೆ ಘೋಷಿಸಿಕೊಂಡಿರಬೇಕು.
- ಎರಡನೆಯದಾಗಿ, ಅವರಿಬ್ಬರಿಗೂ ಕಾನೂನುಬದ್ಧ ಮದುವೆಯ ವಯಸ್ಸಾಗಿರಬೇಕು.
- ಮೂರನೆಯದಾಗಿ ಕಾನೂನುಬದ್ಧ ಮದುವೆಯಾಗಲು ಅವರಿಗೆ ಬೇರೆಲ್ಲ ಅರ್ಹತೆಗಳಿರಬೇಕು. ಎಂದರೆ ಅವರಿಬ್ಬರೂ ಆವರೆಗೂ ವಿವಾಹಿತರಾಗಿರಬಾರದು.
- ನಾಲ್ಕನೆಯದಾಗಿ ಅವರಿಬ್ಬರೂ ದೀರ್ಘಕಾಲ ತಮ್ಮನ್ನು ಸತಿಪತಿಯರೆಂದು ಸಮಾಜಕ್ಕೆ ಪರಿಚಯಿಸಿಕೊಂಡಿರಬೇಕು.

ಸರ್ವೋಚ್ಚ ನ್ಯಾಯಾಲಯದ ಈ ತೀರ್ಪಿನಂತೆ ಎಲ್ಲ ವಿವಾಹೇತರ ಸಹಜೀವನದ ಸಂಬಂಧಗಳಿಗೂ ಈ ಕಾಯ್ದೆ ಅನ್ವಯಿಸುತ್ತದೆಂದು ಹೇಳಲಾಗದು.

"ನಮ್ಮ ತೀರ್ಮಾನದಿಂದ ಹಲವು ಹೆಂಗಸರು ಈ ಕಾಯ್ದೆಯ ಪರಿಧಿಯಿಂದ ಹೊರಗುಳಿಯುತ್ತಾರೆ ಎಂಬ ಅರಿವು ನಮಗಿದೆ. ಆದರೆ ನಾವಿರುವುದು ಕಾನೂನು ಮಾಡಲು ಅಲ್ಲ. ಅದನ್ನು ಮೀಮಾಂಸೆ ಮಾಡಲು ಮಾತ್ರ" ಎಂದಿದೆ ಪೀಠ.

#### 'ಇಟ್ಟುಕೊಂಡವಳು': ಪೀಠಕ್ಕೆ ಪಾಠ

ವಿವಾಹೇತರ ಸಂಬಂಧಗಳಲ್ಲಿ ಹೆಣ್ಣಿಗೆ ಜೀವನಾಂಶ ಕೊಡುವ ಸರ್ವೋಚ್ಚ ನ್ಯಾಯಾಲಯದ ಮಹತ್ವದ ತೀರ್ಪಿನಲ್ಲಿ ಬಳಸಿದ ಭಾಷೆ ಈಗ ವ್ಯಾಪಕ ಟೀಕೆಗೆ ಗುರಿಯಾಗಿದೆ. 'ಇಟ್ಟುಕೊಂಡವಳು' ಈಗ ಪುರುಷ ಪ್ರಧಾನ ಸಮಾಜದ ಪಳಯುಳಿಕೆಯಾಗಿ ಉಳಿದಿರುವುದು ನ್ಯಾಯಾಲಯದ ಗಮನಕ್ಕೆ ಬಂದಂತಿಲ್ಲ. ಇಂದಿರಾ ಜಯಸಿಂಹ ಹೆಚ್ಚುವರಿ ಸೊಲಿಸಿಟರ್ ಜನರಲ್ ಈ ಬಗ್ಗೆ ನ್ಯಾಯಾಲಯದ ಪೀಠಕ್ಕೆ ಪಾಠ ಹೇಳಿದರು.

*ಅಂತರ ರಾಷ್ಟ್ರೀಯ ಕಾನೂನು...*

### ದೊಹಾ ಮಾತುಕತೆ ಬೇಗ ಮುಗಿಸಿ : ಭಾರತ

ವಿಶ್ವ ವಾಣಿಜ್ಯ ಸಂಸ್ಥೆಯ (WTO) ಸದಸ್ಯ ರಾಷ್ಟ್ರವಾಗಿರುವ ಭಾರತ WTO ಡೈರೆಕ್ಟರ್ ಜನರಲ್, ಪಾಸ್ಕಲ್ ಲೇಮಿ ಅವರಿಗೆ ದೋಹಾ ಹಂತದ ಮಾತುಕತೆಯನ್ನು ಕ್ಷಿಪ್ರವಾಗಿ ಮುಗಿಸುವಂತೆ ಒತ್ತಾಯಿಸಿದೆ.

ದೋಹಾ ಹಂತದ ಮಾತುಕತೆಯ ನಂತರ ವಿಶ್ವವ್ಯಾಪಾರದಲ್ಲಿ ಗಣನೀಯ ರೀತಿಗಳ ಬದಲಾವಣೆ ಆಗಲಿದೆ ಎಂಬುದು ಭಾರತದ ಅಭಿಪ್ರಾಯವಾಗಿದೆ. ಇದರಿಂದ ಸದಸ್ಯ ರಾಷ್ಟಗಳು ಆರ್ಥಿಕ ಹಿಂಜರಿತದಿಂದ ಉಂಟಾದ ಹಿನ್ನಡೆಯಿಂದ ಚೇತರಿಸಿಕೊಳ್ಳಲಿವೆ ಎಂಬುದು ಭಾರತದ ಆಶಾವಾದ.

ಭಾರತದ ಕೇಂದ್ರ ವಾಣಿಜ್ಯ ಮಂತ್ರಿ ಆನಂದ ಶರ್ಮಾ ಇತ್ತೀಚೆಗೆ ಪಾಸ್ಕಲ್ ಲೇಮಿಯವರನ್ನು ಜಿನಿವಾದಲ್ಲಿ ಭೇಟಿಯಾದಾಗ ಈ ಅಂಶಗಳನ್ನು ಸ್ಪಷ್ಟಪಡಿಸಿ. "ಈ ಸುತ್ತಿನ ಮಾತುಕತೆಗಳು ಯಶಸ್ವಿ ಮತ್ತು ಕ್ಷಿಪ್ರವಾಗಿ ಮುಗಿದರೆ ವರ್ಷ ೨೦೧೧, ಒಂದು ಅವಕಾಶಗಳ ವರ್ಷವಾಗಲಿದೆ" ಎಂಬ ಭರವಸೆ ವ್ಯಕ್ತಪಡಿಸಿದರು.

# ಬೆಳ್ಳಿ ಬೆಡಗಲ್ಲಿ ಲಹರಿ ಚಳವಳಿ

## ವಕೀಲರ ದಿನಾಚರಣೆ ಮತ್ತು ಹಿನ್ನೆಲೆ

ಭಾಗ-೩

ಕಾನೂನು ಸುವ್ಯವಸ್ಥೆ ಎಂಬ ಬಂಧಗಳು ಸಮಾಜವನ್ನು ಅಹರ್ನಿಶಿ ಬಿಗಿದು ಹಿಡಿದಿರುವುದರಿಂದ ಜನ ನೆಮ್ಮದಿಯ ಬದುಕನ್ನು ಕಾಣುತ್ತಾರೆ. ಸೂರ್ಯ ಬೆಳಗುತ್ತಿದ್ದರೂ, ಕಾನೂನು ಎಂಬ ಬೆಳಕಿಲ್ಲದಿದ್ದರೆ ಸಮಾಜದಲ್ಲಿ ಕಾರ್ಗತ್ತಲೆ ಕವಿದು ಬಿಡುತ್ತದೆ. ಹೀಗಿರುವಾಗ ಕಾನೂನೆಂಬ ದೀವಟಿಗೆಯನ್ನು ಸದಾ ಹೊತ್ತು ನಡೆಯುವ ವಕೀಲರು ಸಮಾಜಕ್ಕೆ ಅದೆಷ್ಟು ಅನಿವಾರ್ಯ ಎಂದು ಬೇರೆ ಹೇಳ ಬೇಕಾಗಿಲ್ಲ. ವೈಜ್ಞಾನಿಕವಾಗಿ ಚಿಂತಿಸಿ, ನ್ಯಾಯಬದ್ಧವಾದ ತಳಹದಿಯ ಮೇಲೆ ಸಮಾಜವನ್ನು ಕಟ್ಟುವುದಷ್ಟೇ ಅಲ್ಲದೆ, ದಿನನಿತ್ಯ ಕಾನೂನುವ್ಯವಸ್ಥೆ ಹಳಿತಪ್ಪದಂತೆ ನೋಡಿಕೊಳ್ಳುವಲ್ಲಿ, ಜನಕ್ಕೆ ಕಾನೂನಿನ ತಿಳವಳಿಕೆ ನೀಡುವಲ್ಲಿ ನ್ಯಾಯಾಲಯದ ಬಳಗೆ-ಹೊರಗೆ ಹೋರಾಡುವ ವಕೀಲರ ಪಾತ್ರ ಮಹತ್ವವುಳ್ಳದ್ದಾಗಿದೆ.

ಸ್ವಾತಂತ್ರ್ಯ ಹೋರಾಟದ ನೇತೃತ್ವ ವಹಿಸಿದ್ದ ಮಹಾತ್ಮಗಾಂಧಿಯವರಂತೆಯೇ ಸ್ವಾತಂತ್ರ್ಯಾ ನಂತರ ದೇಶವನ್ನು ಕಟ್ಟಿ ಮುನ್ನಡೆಸಲು ಸಮರ್ಥವಾದ 'ಭಾರತದ ಸಂವಿಧಾನ' ಶಿಲ್ಪಿ ಡಾ॥ ಅಂಬೇಡ್ಕರ್ ಅವರೂ ವಕೀಲರೇ ಎಂಬುದು ಹೆಮ್ಮೆಯ ಸಂಗತಿ. ಅವರು ಹಾಕಿಕೊಟ್ಟ ಮಾರ್ಗದಲ್ಲಿ ಸಾಗುತ್ತ ಕಾಲಕಾಲಕ್ಕೆ ರಚಿತವಾಗುವ ಕಾನೂನು-ನಿಯಮಗಳನ್ನು ನ್ಯಾಯಾಲಯಗಳ ಒರೆಗೆ ಹಚ್ಚುವ ಕೆಲಸವೂ ವಕೀಲರದೇ ಎಂಬುದೂ ಸತ್ಯ. ಈ ಪ್ರಕ್ರಿಯೆಯನ್ನು ಹಗಲು ಇರುಳು ಎನ್ನದೆ ದುಡಿಯುವ ವಕೀಲರೂ ಸಹಾ ತಮ್ಮ ಕಾರ್ಯ ಚಟುವಟಿಕೆಗಳ ಬಗ್ಗೆ ಆತ್ಮ ನಿರಿಕ್ಷಣೆ ಮಾಡಿಕೊಂಡು. ವೃತ್ತಿಗೆ ಮತ್ತೆ ತಮ್ಮನ್ನು ಪುನರ್ ಸಮರ್ಥಿಸಿಕೊಳ್ಳಲು, ತಮ್ಮ ವೈಯುಕ್ತಿಕ ಸ್ಥಿತಿಗತಿಗಳ ಬಗ್ಗೆ ಚಿಂತಿಸಲು ವರ್ಷದಲ್ಲಿ ಒಂದು ದಿನವನ್ನಾದರೂ ಮುಡಿಪಾಗಿಡುವ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ವಕೀಲರು ಸುಸಂಘಟಿತರಾಗಿ ನ್ಯಾಯಾಂಗದ ತೇರನ್ನು ಎಳೆಯಲು 'ವಕೀಲರ ದಿನಾಚರಣೆ' ನೆರವಾಗುತ್ತದೆ. ಇಂತಹಾ ಆಲೋಚನೆ ಮತ್ತು ದೃಢ ವಿಶ್ವಾಸಗಳಿಂದ ಸೆಪ್ಟೆಂಬರ್ 2004ರಲ್ಲಿ ಲಹರಿಯ ಅಂದಿನ ಅಧ್ಯಕ್ಷರಾಗಿದ್ದ ಎನ್. ಜಯಪ್ರಕಾಶ್ ಅವರ ನೇತೃತ್ವದಲ್ಲಿ ನಡೆದ ಲಹರಿಯ ಕಾರ್ಯಕಾರಿ ಸಮಿತಿಯಲ್ಲಿ 2004ರ ಡಿಸೆಂಬರ್ 3ರಂದು 'ವಕೀಲರ ದಿನಾಚರಣೆ'ಯನ್ನು ಎಲ್ಲ ವಕೀಲರು ಸೇರಿ ನಡೆಸಬೇಕೆದು ಸೂರ್ಯನಾರಾಯಣರಾವ್ ಅವರ ಪ್ರಸ್ತಾವನೆ ಒಕ್ಕೊರಲಿನಿಂದ ಅನುಮೋದಿಸಲಟ್ಟಿತು. ರಾಜ್ಯ ವಕೀಲರ ಪರಿಷತ್ ಸ್ಥಾಪನೆಯಾದ ಡಿಸೆಂಬರ್ 3-1962. ಆ ದಿನವನ್ನೇ ದಿನಾಚರಣೆಗೆ ಸೂಕ್ತವೆಂಬ ತೀರ್ಮಾನಕ್ಕೆ ಬರಲಾಯಿತು. ಹೀಗೆ ಡಿಸೆಂಬರ್ 3-2004ರಂದು ನಡೆದ 'ಅಡ್ವೋಕೇಟ್ಸ್ ಡೇ' ನಿರೀಕ್ಷಗೂ ಮೀರಿ ಯಶಸ್ಸನ್ನು ಕಂಡಿತು.

ಸೂತ್ರಧಾರ ರಾಮಯ್ಯ
೯೪೪೪೮೩ ೧೧೭೨೧

ಪ್ರಪ್ರಥಮವಾದರೂ ವೈವಿಧ್ಯಮಯವಾಗಿ ನಡೆದ ವಕೀಲರ ದಿನಾಚರಣೆಗೆ ಎಲ್ಲ ನಿಟ್ಟನಿಂದಲೂ ಅಭೂತಪೂರ್ವ ಸ್ವಾಗತ ದೊರೆಯಿತು. ನೂರಾರು ಮಂದಿ ವಾಲಾಂಟಿರ್‍ಸ್‌ಗಳು ಆ ದಿನ ಬೆಳಗ್ಗಿನಿಂದಲೇ ಕೋರ್ಟ್‌ಗಳ ಬಾಗಿಲು ಗೇಟ್‌ಗಳ ಬಳಿ ನಿಂತು ಬರುತ್ತಿದ್ದ ವಕೀಲರ ಕೋಟುಗಳಿಗೆ 'ಅಡ್ವೋಕೇಟ್ಸ್ ಡೇ' ಫ್ಯಾಗ್‌ಗಳನ್ನು ಹಚ್ಚಾತ್ತಾ ಸಂಭ್ರಮಸಿದರು. ನಗರದ ಸಿವಿಲ್ ವಕೀಲರು ರಕ್ತದಾನ ಮಾಡಿದರು. ಆ ದಿನದ ಇನ್ನೊಂದು ಬಹುಮುಖ್ಯವಾದ ಸಂಗತಿ, ವಕೀಲರ, ವಕೀಲರ ವೃತ್ತಿಗೆ ಸಂಬಂಧಿಸಿದ ಚರಿತ್ರಾರ್ಹ ವಸ್ತುಗಳ (Artibaot) ಪ್ರದರ್ಶನ ಹೈಕೋಟಿನ ವಕೀಲರ ಸಂಘದ ಕೇಳಮಹಡಿಯಲ್ಲಿ ವ್ಯವಸ್ಥೆಗೊಂಡಿತ್ತು. ಹೆಸರಾಂತ ಹಿರಿಯವಕೀಲರು ಬಳಸುತ್ತಿದ್ದು ಪರಿಕರಗಳು. ಲಾರಿಪೋರ್ಟರ್ಸ್ ಪೆನ್ನು ಮಸಿಕುಡಿಕೆಗಳು, ಟೈಪ್‌ರೈಟರ್‌ಗಳು, ಕೈಬರಹದಾದಲ್ಲೇ ರಚಿತವಾದ ಅಪೂರ್ವದಾಖಲೆಗಳು, ಅಪೂರ್ವ ಛಾಯ ಚಿತ್ರಗಳು ಹೀಗೆ ಅಚ್ಚರಿ ಮೂಡಿಸುವಂತಹಾ ಅಮೂಲ್ಯ ವಸ್ತಗಳ ಆಗರವೇ ಅಲ್ಲದ್ದು, ಹಳೆಯ ತಲೆಮಾರಿನ ಸಂಗತಿಗಳನ್ನು ಹೊಸತಲೆಮಾರಿಗೆ ಪರಿಚಯಿಸುತ್ತಾ ಥ್ರಿಲ್ ಮೂಡಿಸಿತ್ತು ಎಂದರೆ ಅತಿಶಯೋಕ್ತಿಯಲ್ಲ. ಪ್ರದರ್ಶನವನ್ನು ವೀಕ್ಷಿಸಲು ಅಂದಿನ ಮುಖ್ಯನ್ಯಾಯ ಮೂರ್ತಿ ಎಸ್.ಕೆ.ಸೋಧಿಯವರಾದಿಯಾಗಿ ಹೈಕೋರ್ಟಿನ ಎಲ್ಲ ನ್ಯಾಯಮೂರ್ತಿಗಳು ಆಗಮಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಅಧೀನ ನ್ಯಾಯಾಲಯಗಳ ಎಲ್ಲ ನ್ಯಾಯಾಧೀಶರುಗಳೂ ಪ್ರದರ್ಶನವನ್ನು ನೋಡುವಂತೆ ಹೈಕೋರ್ಟ್ ಸೂಚನೆ ನೀಡಿದ್ದು ವಿಶೇಷವೆಂದೇ ಹೇಳಬೇಕು. ಮಾಧ್ಯಮಗಳಲ್ಲಿ ವ್ಯಾಪಕವಾದ ಪ್ರಚಾರ ದೊರೆತ ಫಲವಾಗಿ ನಗರದ ಎಲ್ಲಾ ನ್ಯಾಯಾಲಯಗಳಿಂದಲು ವಕೀಲರ ದಂಡೇ ಹೈಕೋರ್ಟಿಗೆ ಧಾವಿಸಿದ್ದು ಸಂಘಟನ ಕಾರರಲ್ಲಿ ಧನ್ಯತೆಯನ್ನು ಮೂಡಿಸಿತ್ತು.

ಅಂದು ಸಂಜೆ 5.30ಕ್ಕೆ ಎಸ್.ಜಿ.ಓ ಸಂಘದ ಭವನದಲ್ಲಿ ನಡೆದ ಸಾಂಸ್ಕೃತಿಕ ಸಮಾರಂಭ 'ಅಡ್ವೋಕೇಟ್ಸ್ ಡೇ' ಕಳಶಪ್ರಾಯವಾಯಿತು.ಲಹರಿ ನಡೆಸಿದ ವಕೀಲರ ದಿನಾಚಾರಣೆ ಫಲವಾಗಿ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಸಂಭವಿಸಿದ ಎರಡು ಪ್ರಮುಖ ಘಟನೆಗಳೆಂದರೆ, ಆರ್ಟಿಪ್ಯಾಕ್ಟ್ ಪ್ರದರ್ಶನದಿಂದ ಪ್ರೇರೇಪಣೆ ಪಡೆದು ರಾಜ್ಯ ಹೈಕೋರ್ಟ್‌ನಲ್ಲಿ ನ್ಯಾಯಾಂಗದ ವಸ್ತು ಸಂಗ್ರಹಾಲಯ ಪ್ರಾರಂಭವಾದುದ್ದು ಹಾಗೂ ರಾಜ್ಯ ವಕೀಲರ ಪರಿಷತ್ತಿನ ಶಿಫಾರಸ್ಸಿನ ಮೇರೆಗೆ ಮಾಜಿ ರಾಷ್ಟ್ರಪತಿ ಡಾ॥ ರಾಜೇಂದ್ರ ಪ್ರಸಾದ ಜನ್ಮದಿನದಂದು ದೇಶಾದಾದ್ಯಂತ ಡಿದೆಂಬರ್ 3ರಂದು ವಕೀಲರ ದಿನಾಚಾರಣೆ 2009 ರಿಂದ ಚಾಲನೆ ಪಡೆದಿದ್ದು ಈ ಬೆಳವಣಿಗೆಯಲ್ಲಿ ಲಹರಿ ಸಂಸ್ಥೆಯ ಯೋಗದಾನ ಅದರಲ್ಲೂ ವಕೀಲರ ದಿನಾಚಾರಣೆಗೆ ಎಲ್ಲರನ್ನು ಹುರಿದುಂಬಿಸಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸುವಲ್ಲಿ ದುಡಿದ ಅಂದಿನ ಅಧ್ಯಕ್ಷರಾದ ಶ್ರೀ ಎನ್. ಜಯಪಕಾಶ್ ಅವರ ಕೊಡುಗೆ ಅಮೂಲ್ಯ ಎಂದೇ ಹೇಳಬೇಕು ಇದೀಗ ನಗರದ ರಾಜ್ಯದ ಎಲ್ಲ ವಕೀಲರು, ಸಂಘಸಂಸ್ಥೆಗಳು ಮುಂದಿನ ತಿಂಗಳು 3ರಂದು ಅಡ್ವೋಕೇಟ್ಸ್ ಡೇ ಆಚರಿಸುತ್ತಿರುವುದು ಸಂತಸದ ಸಂಗತಿ

ಕೊನೆಗೆ ಒಂದು ವಿಷಯವನ್ನು ಹೇಳಲೇಬೇಕು ಸ್ವಾತಂತ್ರ್ಯ ಬಂದ ಮುರ್‍ನಾಲ್ಕು ದಶಕಗಳಲ್ಲಿ ರಾಜ್ಯ ರಾಜಕಾರಣವನ್ನು ಬಹುತೇಕ ವಕೀಲರೇ ಮುನ್ನಡೆಸಿದ್ದರಿಂದ ಸಾಮಾಜಿಕ ಜೀವನದಲ್ಲಿ ಮುದವಿತ್ತು ಹದವಿತ್ತು, ಕಾನೂನ ಅಂಕುಶವಿತ್ತು ಆಸ್ಥಾನದಲ್ಲಿ ಪ್ರಸ್ತುತ ಪ್ರಜಾಪ್ರಭುತ್ವಕ್ಕೆ ಧಕ್ಕೆತರುವ ರೀತಿಯಲ್ಲಿ ಉದ್ಯಮಿಗಳು, ವ್ಯಾಪಾರ ವ್ಯವಹಾರಸ್ಥರೇ ಸೇರಿ ಹೋಗಿ ಮಿತಿಮೀರಿದ ಅವರ ಲಾಲಸೆಗೆ 'ಲಾಲೆಸ್‌ನೆಸ್'ದಾಂಡ್ ವಾಡಿದೆ. ರೂಲ್ ಆಫ್ ಲಾ ಹೋಗಿ ರೂ (ಡ್) ಲಾಫ್ ಲಾ ತಲೆ ಎತ್ತಿದೆ. ಇದರಿಂದಾಗಿ ಬೇಸತ್ತಿರುವ ಜನಾ ಉತ್ತಮ ನಾಯಕತ್ವದಕ್ಕಾಗಿ ಸಾಮಾಜಿಕ ನ್ಯಾಯಕ್ಕಾಗಿ ಮತ್ತೊಮ್ಮೆ ವಕೀಲರತ್ತ ನೋಡುವಂತಾ ಪರಿಸ್ಥಿತಿ ಉದ್ಭವಿಸಿದೆ. ಮೂಕಪ್ರೇಕ್ಷಕರಾಗಿರುವುದನ್ನು ಅನುಕೂಲ ನೋಡಿಕೊಂಡು ಬಿಟ್ಟು ಹೆಚ್ಚಿನ ಸಂಖ್ಯೆಯಲ್ಲಿ ವಕೀಲರು ಮುಂಬರುವ ಚುನಾವಣೆ ಎಂಬ ಸಂಗ್ರಾಮಕ್ಕೆ ಇಳಿದಲ್ಲಿ ಪ್ರಜಾಪ್ರಭುತ್ವ ಉಳಿದೀತು. ಇಂತಹ ಒಂದು ಸಂದರ್ಭಕ್ಕೆ ತಕ್ಕ ವೇದಿಕೆಯನ್ನು ಮುಂಬರುವ ವಕೀಲರ ದಿನಾಚರಣೆ ನಿರ್ಮಿಸಲಿ-ಎಂದು ಹಾರೈಸೋಣ.

# ಸಮಯ ಬದಲಾವಣೆಗೆ ಕಾಲ ಸನ್ನಿಹಿತ?

ಉಚ್ಚ ನ್ಯಾಯಾಲಯದ ಅಂಗಳದಲ್ಲಿ ಸದ್ದಿಲ್ಲದೆ ನ್ಯಾಯಾಲಯಗಳ ಸಮಯ ಬದಲಾವಣೆಗೆ ಬೇಡಿಕೆ, ಒತ್ತಾಯದ ದನಿ ಎದ್ದಿದೆ. ಕೇವಲ ಕೆಲ ಆಪ್ತ ವಲಯಗಳಲ್ಲಿ ಮಾತ್ರ ಚರ್ಚಿತವಾಗುತ್ತಿರುವ ಈ ವಿಷಯ, ಮೆಟ್ರೊದ ತಡೆ ಗೋಡೆಗಳು ಎಲ್ಲೆಡೆ ಹರಡುತ್ತಿದ್ದಂತೆ ದಿನ ದಿನಕ್ಕೂ ಪ್ರಾಮುಖ್ಯ ಪಡೆದುಕೊಳ್ಳಲಾರಂಭಿಸಿದೆ.

ವಿಷಯ ಇಷ್ಟೆ. 'ನಮ್ಮ ಮೆಟ್ರೊ' ಕಾಮಗಾರಿಯಿಂದ ನಗರದಾದ್ಯಂತ ಸಂಚಾರ ಸಮಸ್ಯೆಯ ಗೋಳು. ಬೆಳಿಗ್ಗೆ ೯ರಿಂದ ಸಂಜೆ ೬.೩೦ರ ವರೆಗಿನ ವೇಳೆಯಲ್ಲಿ ಖಾಸಗಿ ವಾಹನವಿರಲಿ, ಸಾರ್ವಜನಿಕ ಸಾರಿಗೆಯಿರಲಿ ಒಂದು ಕಡೆಯಿಂದ ಮತ್ತೊಂದು ಕಡೆ ಸಂಚರಿಸುವುದು ದುಸ್ತರವಾಗಿದೆ. ಸರಿಯಾದ ಸಮಯಕ್ಕೆ ಗುರಿ ತಲುಪುವ ಭರವಸೆ ಇಲ್ಲ. ಸಿವಿಲ್ ಕೋರ್ಟ್ ಸಂಕೀರ್ಣದ ಬಳಿ ನಮ್ಮ ಮೆಟ್ರೋ ಕಾಮಗಾರಿ ಆರಂಭವಾಗಿದೆ. ಉಚ್ಚ ನ್ಯಾಯಾಲಯ-ವಿಧಾನಸೌಧದ ಮುಂಭಾಗಗಳಲ್ಲಿ ಕೆಲ ದಿನಗಳಲ್ಲಿ ಮೆಟ್ರೊ ಕೆಲಸ ಶುರುವಾಗಲಿದೆ. ಸಂಚಾರ ಇನ್ನೂ ದುಸ್ತರವಾಗಲಿದೆ.

ಈ ಸಮಸ್ಯೆಗೆ ಪರಿಹಾರವೇನು? ನ್ಯಾಯಾಲಯಗಳ ಕಲಾಪಗಳ ಸಮಯ ಬದಲಾವಣೆಯೇ ಪರಿಹಾರ. ನ್ಯಾಯಾಲಯಗಳು ಬೆಳಿಗ್ಗೆ ೮ ಅಥವಾ ೮.೩೦ರಿಂದ ಮಧ್ಯಾಹ್ನ ೩ ಅಥವಾ ೩.೩೦ರವರೆಗೆ ನಡೆದರೆ ಹೇಗೆ?

ಈ ಪರಿಹಾರೋಪಾಯಕ್ಕೆ ಹಲವು ಹಿರಿಯ ವಕೀಲರ ಮತ್ತು ನ್ಯಾಯಾಧೀಶರ ಖಾಸಗಿ ಸಹಮತವಿದೆ ಎನ್ನಲಾಗಿದೆ. ಎಎಬಿ ಅಧ್ಯಕ್ಷ, ಕೆ.ಎನ್. ಪುಟ್ಟೇಗೌಡರನ್ನು ಪತ್ರಿಕೆ ಸಂಪರ್ಕಿಸಿದಾಗ "ವೈಯಕ್ತಿಕವಾಗಿ ಇದಕ್ಕೆ ನನ್ನ ಬೆಂಬಲವಿದೆ ಆದರೆ, ಸಂಘದ ಅಧ್ಯಕ್ಷನಾಗಿ ಸದಸ್ಯರ ಅಭಿಪ್ರಾಯ ಪಡೆದುಕೊಳ್ಳದೆ ಏನೂ ಹೇಳಲಾರೆ", ಎಂದರು.

ಬದಲಾವಣೆಯ ಸೂಚನೆಯನ್ನು ತೆರೆದ ಮನದಿಂದ ಚರ್ಚಿಸೋಣ. ಅನುಕೂಲ ಕಂಡುಬಂದರೆ ಒಪ್ಪಿಕೊಳ್ಳೋಣ. ಏನನ್ನುತ್ತೀರಿ? ನಿಮ್ಮ ಅಭಿಪ್ರಾಯ ಪತ್ರಿಕೆಗೆ ತಿಳಿಸಿ.

### ನಿಮ್ಮೊಂದಿಗೆ...

ಏಪ್ರಿಲ್ ೧೯೮೯ರಂದು ತನ್ನ ಮೊದಲ ಸಂಚಿಕೆ ಹೊರಡಿಸಿದ ಕಮ್ಯುನಿಕ್ ಈಗ ೨೧ ವರ್ಷದ ಪತ್ರಿಕೆ. ಮಾರ್ಚ್ ೨೦೦೦ರಂದು ಮೊದಲ ಸಂಚಿಕೆ ಹೊರಡಿಸಿದ ಲಹರಿ ಸಂವಾದ ಈಗ ೧೦ ವರ್ಷ ವಯಸ್ಸಿನ ಪತ್ರಿಕೆ.

ಪತ್ರಿಕೆಯನ್ನು ಬಟವಾಡೆ ಮಾಡುವ ಅಂಚೆ ವೆಚ್ಚ ಏರುತ್ತಿರುವ ಹಿನ್ನೆಲೆಯಲ್ಲಿ ಪತ್ರಿಕೆಗಳನ್ನು Registrar of News Papers ಅವರಲ್ಲಿ ನೋಂದಾಯಿಸಿ ಅಂಚೆ ಹಾಸಲಿನಲ್ಲಿ ರಿಯಾಯಿತಿ ಕೇಳಲು 'ಲಹರಿ' ತೀರ್ಮಾನಿಸಿತು. ಅದರಂತೆ ನೋಂದಣಿ ಪ್ರಕ್ರಿಯೆಗಳು ನಡೆಯುತ್ತಿವೆ.

ನೋಂದಣಿ ಪ್ರಕ್ರಿಯೆಗಳಿಗನುಗುಣವಾಗಿ, ಪತ್ರಿಕೆಗಳನ್ನು ತಾಂತ್ರಿಕವಾಗಿ ಹೊಸದಾಗಿ ಪ್ರಾರಂಭಿಸಿ ಒಂದನೆಯ ಸಂಪುಟವೆಂದು ತೋರಿಸಲಾಗುತ್ತಿದೆ. ನೋಂದಣಿ ಉದ್ದೇಶದಿಂದ ಹೀಗೆ ತೋರಿಸಿದರೂ 'ಲಹರಿ ಕಮ್ಯುನಿಕ್' ಮತ್ತು 'ಲಹರಿ ಸಂವಾದ' ಕ್ರಮವಾಗಿ ೨೧ ಮತ್ತು  ಮತ್ತು ೧೦ ವರ್ಷಗಳಷ್ಟು ಹಳೆಯ ಪತ್ರಿಕೆಗಳೆನ್ನುವುದು ಸರ್ವವಿದಿತ.

ನೋಂದಣಿಯ ಕಾರಣಕ್ಕಾಗಿಯೇ ಪತ್ರಿಕೆಗಳ ಮಾಸ್ಟ್ ಹೆಡ್ (ಪತ್ರಿಕೆ ಹೆಸರು) ನಲ್ಲಿ ಸಣ್ಣ ಬದಲಾವಣೆ ಮಾಡಿರುವುದನ್ನು ದಯವಿಟ್ಟು ಗಮನಿಸಿ.

# ಕೆನಡಾದಲ್ಲೊಬ್ಬ ಕನ್ನಡಿಗ

*ಹಿಂದಿನ ಸಂಚಿಕೆಯಿಂದ*

ಕೆನಡಾದಲ್ಲಿ ಜನಸಾಂದ್ರತೆ ಕಡಿಮೆಯಿರುವುದರಿಂದಾಗಿ ಆ ದೇಶ ಇನ್ನೂ ತನ್ನತನವನ್ನು ಕಳೆದುಕೊಂಡಂತಿಲ್ಲ. ಆದರೆ ಇತ್ತೀಚೆಗೆ ಅಲ್ಲಿಗೆ ವಲಸೆ ಬರುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿರುವ ಹಾಗಿದೆ. ಬಹಳ ಹೆಚ್ಚಾಗಿ ಚೀನೀಯರು, ಕಪ್ಪುಜನ, ಶ್ರೀಲಂಕಾ ತಮಿಳರನ್ನು ನೋಡುತ್ತೇವೆ.

ನಾವು ಭೇಟಿಯಿತ್ತ ಸಮಯ ಬೇಸಿಗೆ ಸಮಯವಾದ್ದರಿಂದ ಕೆನಡಾದ ನವೆಂಬರ್‌ರಿಂದ ಮಾರ್ಚ್‌ವರೆಗಿನ ಚಳಿಯ ಅನುಭವ ನಮಗೆ ತಟ್ಟಲಿಲ್ಲ. ಬೇಸಿಗೆಯೆಂದರೆ ಇಲ್ಲಿನ ಜನರಿಗೆ ಬಟ್ಟೆಯ ಮೇಲೆ ದ್ವೇಷ ಹುಟ್ಟುತ್ತದೇನೋ ಅನ್ನಿಸಿತು. ಅಲ್ಲಿನ ಲಲನಾಮಣಿಯರನ್ನು ನೋಡಿದಾಗ. ಮಿತ ಬಟ್ಟೆಯ ಫ್ಯಾಶನ್ ಎಲ್ಲೆಲ್ಲೂ. ಆದರೆ ಅವರಿಗೆ ಆ ಬಗ್ಗೆ ಅಂತಹ ಸಂಕೋಚವೇನೂ ಇಲ್ಲ. ವಾರಾಂತ್ಯ ಎಂದರೆ ಪ್ರವಾಸ. ಸ್ವಂತ ಬೋಟುಗಳನ್ನು ಕಾರಿಗೆ ಕಟ್ಟಿ ಹೊಳೆಗಳಿಗೆ, ನದಿತೀರಗಳಿಗೆ ಹೊರಟು ಬಿಡುತ್ತಾರೆ. ಅಲ್ಲದೆ ರೂಮಿನ ಸೌಕರ್ಯದ ಟ್ರೈಲರ್‌ಗಳನ್ನು ಕಾರಿಗೆ ತಗಲಿಸಿಕೊಂಡು ಹೊರಟು ಬಿಡುತ್ತಾರೆ. ರಸ್ತೆಗಳಲ್ಲಿ ಜನರಿಗಿಂತಲೂ ಹೆಚ್ಚು ನಾವು ನೋಡುವುದು ಕಾರುಗಳನ್ನು. ಟೋರಾಂಟೋ ನಗರದ ಮತ್ತೊಂದು ವಿಶೇಷವೆಂದರೆ C.N. Towers. ೧೨೫೦ ಅಡಿ ಎತ್ತರದ ಈ ಗೋಪುರಕ್ಕೆ ಲಿಫ್ಟ್‌ನಲ್ಲಿ ಪಯಣ. ಒಂದು ನಿಮಿಷ ೫೦ ಸೆಕೆಂಡ್‌ಗಳಲ್ಲಿ ಮೇಲೆ ಸೇರಿಬಿಡುತ್ತೇವೆ. ಅಲ್ಲಿಂದ ಅಲ್ಲಿನ ಗಗನಚುಂಬಿ ಕಟ್ಟಡಗಳು, ಬೈತಲೆಯಾಕಾರದ ರಸ್ತೆಗಳು, ಆಂಟಾರಿಯೋ ಹೊಳೆ ಇವುಗಳನ್ನು ನೋಡುವುದೇ ಒಂದು ಅನುಭವ.



ಜಿ.ಎಸ್. ನಟರಾಜನ್
೯೯೧೬೯ ೧೯೪೮೧

ಒಂದು ದಿನ ನಮ್ಮ ಅಳಿಯ ಸುಮ್ಮನಿರಲಾರದೆ ನಮ್ಮನ್ನು ಮತ್ತೊಂದು ನಗರ ಮಾಂಟ್ರೀಐಲ್ (Montreal) ನಗರದ ಕ್ಯಾಸಿನೋಗೆ ಕರೆದುಕೊಂಡು ಹೋದಾಗ ರಾತ್ರಿ ಹನ್ನೊಂದು ಗಂಟೆ ಮತ್ತು ಆಗ ಅಲ್ಲಿದ್ದ ೮೦–೮೫ ವರ್ಷದ ಆಸುಪಾಸಿನ ಹೆಣ್ಣು ಜೂಜುಕೋರರನ್ನು ನೋಡಿ ನಾನು ಆಶ್ಚರ್ಯಪಟ್ಟೆ. ಆ ಮುದುಕ ಮುದುಕಿಯರ ಮುಖಗಳಲ್ಲಿನ ಖುಶಿ, ವರ್ಚಸ್ಸನ್ನು ನೋಡಿಯೇ ನಂಬಬೇಕು. ವೃದ್ಧಾಪ್ಯ ಪೆನ್‌ಶನ್ ಹಣ ಚಟ್ ಮಾಡುವುದೇ ಆದ್ಯ ಕರ್ತವ್ಯ ಎನ್ನುವ ಹಾಗೆ ಇವರುಗಳು ಬಂದು ಅಲ್ಲಿ ಆ ಕಂಪ್ಯೂಟರ್ ಮಾನಿಟರ್‌ಗಳ ಮುಂದೆ ಕೂರುತ್ತಾರೆ. ಸದಾಕಾಲ ಕಾಫಿ, ಟೀ, ತಿಂಡಿ ಲಭ್ಯವಿರುವ ಕ್ಯಾಂಟೀನ್, Kiosk ಗಳಿರುತ್ತವೆ.

ಕೆನಡಾದಲ್ಲಿ Tim Hortins ಎಂಬ ಆಹಾರದಂಗಡಿಗಳು ಬಹಳ. ನಮ್ಮ ಐಯ್ಯಂಗಾರ್ ಬೇಕರಿಗಳ ಜನಪ್ರಿಯತೆಯನ್ನು ಇದಕ್ಕೆ ಹೋಲಿಸಬಹುದು. ಬಹಳಷ್ಟು ಕಾಫಿ ನಾನು ಕುಡಿದದ್ದು ಇಲ್ಲಿಯೇ. ಇಲ್ಲಿನ ಜನ ಸೇರುಗಟ್ಟಲೆ ಕಾಫಿ ಕುಡಿಯುತ್ತಾರೆ ಎಂದರೆ ನಂಬಲೇಬೇಕು. "ಸೆಕೆಂಡ್ ಕಪ್" ಎನ್ನುವ ಕಾಫಿ ಶಾಪ್‌ಗಳು, ಬಹಳ ಕಡೆ ಇವೆ. ನಾನು ಇದ್ದ ಜಾಗ ಮಿಸಿಸಾಗದಿಂದ ಟೋರಾಂಟೋನಗರದ Down Town ೧೫–೨೦ ಕಿ.ಮೀ. ದೂರವಿದ್ದು, ಬಸ್ ಹಾಗೂ ಸಬ್‌ವೇನಲ್ಲಿ ಪ್ರಯಾಣ ಮಾಡಬೇಕು. Down Town ನಲ್ಲಿ ಟ್ರಾಮ್ ಕೂಡ ಲಭ್ಯ. ಎಲ್ಲಾ ಮ್ಯೂಸಿಯಂ, ಆರ್ಟ್ ಗ್ಯಾಲರಿ, ಥಿಯೇಟರ್‌ಗಳು, ಪುಸ್ತಕದಂಗಡಿಗಳು ಇರುವುದು Down townನಲ್ಲೇ. ಟೋರಾಂಟೋ 'ಜೂ' ಮಾತ್ರ ೩೦ ಕಿ.ಮೀ. ದೂರ. ಅದೊಂದು ಅತ್ಯದ್ಭುತ 'ಜೂ'. ಪ್ರತಿಯೊಂದು ಪ್ರಾಣಿಗೂ ಹೊರಾಂಗಣ, ಒಳಾಂಗಣ ಲಭ್ಯ. ಸ್ಥಳೀಯ ಪರಿಸರಗಳನ್ನು ನಿರ್ಮಿಸಿಟ್ಟಿರುವುದರಿಂದ ಪ್ರಾಣಿಗಳು ಹೆಚ್ಚು ಸಂತೋಷ, ಸ್ವಾತಂತ್ರದಿಂದ ಅಲ್ಲಿರುವ ಹಾಗೆ ಅನ್ನಿಸುತ್ತದೆ.

ಕೆನಡಾ ಒಂದು ಬೃಹತ್ ದೇಶ. ಜಗತ್ತಿನ ಎರಡನೇ ದೊಡ್ಡ ದೇಶವಾದರೂ ಇಲ್ಲಿನ ಜನಸಂಖ್ಯೆ ಕೇವಲ ನಮ್ಮ ಕರ್ನಾಟಕದಷ್ಟು. ಹತ್ತು ರಾಜ್ಯಗಳ ಈ ದೇಶದಲ್ಲಿ ಆಂಟ್ಯಾರಿಯೋ ದೊಡ್ಡ ರಾಜ್ಯ. ತಾನಾಗಿಯೇ ಟೋರಾಂಟೋ ನಗರಕ್ಕೆ ಹೆಚ್ಚು ಪ್ರಾಶಸ್ತ್ಯ. ಕೆನಡಾದ ಸರ್ವೋಚ್ಚ ನ್ಯಾಯಾಲಯ ಇರುವುದು ಇಲ್ಲೇ. ಇಲ್ಲಿನ ಉಚ್ಚ ನ್ಯಾಯಾಲಯಗಳನ್ನು Court of Appeal & Court of Justice ಎಂದು ಕರೆಯುತ್ತಾರೆ. ನ್ಯಾಯವಾದಿಗಳಲ್ಲಿ ನ್ಯಾಯಾಧೀಶರುಗಳಲ್ಲಿ ಒಂದು ಧೃಡ ನಂಬಿಕೆಯ ಬಂಧ ಇಲ್ಲಿದೆ ಎನ್ನುತ್ತಾರೆ ಬಹಳಷ್ಟು ವಕೀಲರು. ಸಾಧಾರಣವಾಗಿ ಇಲ್ಲಿನ ವಕೀಲರು ನಮಗೆ ಹೋಲಿಸಿದರೆ ಉತ್ತಮ ಗಳಿಕೆ ಹೊಂದಿರುತ್ತಾರೆ. Judicial Process ಇಲ್ಲಿ ಸ್ವಲ್ಪ ದುಬಾರಿಯೇ. ಗಂಟೆಗೆ ಇಷ್ಟೆಂದು ಹಣ ಪಡೆಯುವ ವಕೀಲರ ಸೇವೆ ಸುಲಭದ್ದಲ್ಲ. ಅದಕ್ಕಾಗಿ ಇಲ್ಲಿ ರಿಯಾಯಿತಿ ದರದಲ್ಲಿ ಹಣವಂತರಲ್ಲದವರ ನೆರವಿಗಾಗಿ ಕಾನೂನುಸೇವೆ ನೀಡುವ ವಕೀಲರ ಗುಂಪೂ ಇದೆ.

ಒಟ್ಟಾರೆ ಹೇಳುವುದಾದರೆ ಇಲ್ಲಿನ ನ್ಯಾಯ ವ್ಯವಸ್ಥೆ ನಮ್ಮ ನ್ಯಾಯ ವ್ಯವಸ್ಥೆಗಿಂತ ಭಿನ್ನವಾಗೇನೂ ಇಲ್ಲ. ಆದರೆ ಹೆಚ್ಚಿನ ಶಿಸ್ತು, ಕಾಳಜಿ, ಸಂಯಮ ನ್ಯಾಯಾಲಯ ವ್ಯವಸ್ಥೆಯಲ್ಲಿ ಎದ್ದು ಕಾಣುತ್ತದೆ. ಭ್ರಷ್ಟಾಚಾರದ ಸುಳಿವು ಎಲ್ಲಿಯೂ ಕಾಣುವುದಿಲ್ಲ. ಪಕ್ಷಗಾರರನ್ನು ನ್ಯಾಯಾಧೀಶರು ಹೆಚ್ಚು ಸೌಜನ್ಯದಿಂದ ಮಾತನಾಡಿಸುವುದನ್ನು ಕಾಣಬಹುದು. ಇಲ್ಲಿ ಕಪ್ಪು ಕೋಟು, ಬ್ಯಾಂಡ್ ಇಲ್ಲ. ಸೂಟು ಟೈ, ಎಲ್ಲ ವಕೀಲರೂ ಧರಿಸಿರುತ್ತಾರೆ. ಮೇಲಿನ ನ್ಯಾಯಾಲಯಗಳಲ್ಲಿ ಗೌನು ಧರಿಸುತ್ತಾರೆ. ನ್ಯಾಯಾಲಯಗಳಲ್ಲಿ ನ್ಯಾಯ ವಿಲೇವಾರಿ ಕೆಲಸಕ್ಕೆ ಮಾತ್ರವೇ ಆದ್ಯತೆಯಿದ್ದು, ಕಾಡುಹರಟೆಗಳಲ್ಲಿ ವಕೀಲರು ಕಳೆಯುವುದು ಅಪರೂಪ. ಯಾರನ್ನೇ ನೋಡಿದರೂ ಮುಗುಳು ನಗುವುದು ಇಲ್ಲಿನ ಜನರ ಅಭ್ಯಾಸ. ಸ್ಪ್ರಿಂಗ್ ಬಾಗಿಲುಗಳನ್ನು ತೆರೆದು ಒಳ ಹೋಗುವಾಗ ಹಿಂದೆ ಯಾರಾದರೂ ಬರುತ್ತಿದ್ದರೆ ಅವರಿಗೂ ಒಳಬರುವವರೆಗೆ ಬಾಗಿಲು ಹಿಡಿದು ನಿಲ್ಲುವುದು ಸೌಜನ್ಯದ ಲಕ್ಷಣ. ಜೀವನ ದುಬಾರಿಯೇ. ಯಾವುದೇ ವಸ್ತುವಾದರೂ ಕೆನಡಾದ ವಿಶೇಷ ಅನ್ನಿಸುವಂತಹುದು ಇಲ್ಲಿ ಕಡಿಮೆ. ಕೊಳ್ಳುವವರಿಗೆ ವಿಶೇಷ ಆಕರ್ಷಣೆಗಳು ಇಲ್ಲಿಲ್ಲ. ಇಲ್ಲಿನ ಶುಭ್ರ ಪರಿಸರವೇ ಬದುಕಿಗೆ ಬೋನಸ್. ರಸ್ತೆಗಳಲ್ಲಿನ ಓಡಾಟದ ಶಿಸ್ತೂ ಚೆನ್ನ.

ಕೆನಡಾದಲ್ಲಿ ವೃದ್ಧಾಪ್ಯದಿಂದ ಬಳಲುವವರ ಸಂಖ್ಯೆ ಕಡಿಮೆ. ೭೦–೭೫ರ ಮುದುಕರು ಉತ್ಸಾಹದಿಂದ ಸೈಕಲ್ ಓಡಿಸಿಕೊಂಡು ಓಡಿಯಾಡುತ್ತಾರೆ, ದುಡಿಯುತ್ತಾರೆ, ಅಂತೆಯೇ ವಯಸ್ಸಾದ ಹೆಂಗಸರೂ ಸಾಕಷ್ಟು Independent. ಇಲ್ಲಿ ಹಿರಿಯ ನಾಗರಿಕರಿಗೆ Pension ನೀಡುತ್ತಾರೆ. ಆರೋಗ್ಯ ರಕ್ಷಣೆ ಪ್ರತಿಯೊಬ್ಬ ಪ್ರಜೆಗೂ ಇರುತ್ತದೆ. ಇಲ್ಲಿ ಎಲ್ಲಕ್ಕೂ ೧೩.೫% ಮಾರಾಟ ತೆರಿಗೆ. ಅಂತೆಯೇ ಎಲ್ಲೆಲ್ಲೂ ಶೇ. ೧೦–೧೫ರ ಟಿಪ್ ಕೂಡ ಅನಿವಾರ್ಯ. ಕೆಲಸ ಕಳೆದುಕೊಂಡವರಿಗೆ ಕೆಲಸ ಸಿಗುವವರೆಗೂ ಪರಿಹಾರ ಭತ್ಯೆಯನ್ನು ಸರ್ಕಾರ ನೀಡುತ್ತದೆ. ನಾನು ಕೆನಡಾದಲ್ಲಿ ನೋಡಿರುವುದು ಸ್ವಲ್ಪವೇ ಸ್ವಲ್ಪ ಮಾತ್ರ. ಆದ್ದರಿಂದ ನನ್ನ ಈ ಅನಿಸಿಕೆಗಳೇ ಕೆನಡಾದ ಬಗ್ಗೆಯ ಅಂತಿಮ ವಾಕ್ಯಗಳಲ್ಲ.

ಲೋಕೋ ಭಿನ್ನ ರುಚಿಃ. ಏಕೆಂದರೆ ಇಲ್ಲಿನ ಹೊರಗಿನ ತಿಂಡಿಗಳ (ಸಸ್ಯಾಹಾರಿಯೇ ಆದರೂ) ರುಚಿ ನನ್ನ ಹೆಂಡತಿಯ ನಾಲಗೆಗೆ ಒಗ್ಗಲೇ ಇಲ್ಲ. ಹಣ್ಣು ಹಂಪಲು ಹುಲುಸಾಗಿ ಸಿಗುವುದೇ ಮುಖ್ಯ ಅದೃಷ್ಟ. ಇಲ್ಲಿನ ಎಲ್ಲಾ ನಗರಗಳಲ್ಲಿಯೂ ಎಲ್ಲೋ ಒಂದೊಂದು ಮೂಲೆಯಲ್ಲಿ ಪಕ್ಕಾ ಸಸ್ಯಾಹಾರಿ ಹೋಟೆಲ್‌ಗಳೂ ಒಂದೊಂದು ಇವೆ. ಅಂತಹವುಗಳಲ್ಲಿ ಮಿಸಿಸಾಗಾ ನಗರದಲ್ಲಿಯೇ ಒಂದು ಉಡುಪಿ ಮದ್ರಾಸ್ ಕೆಫೆ ಇದೆ. ಒಂದು 'ಸರವಣ ಭವನ್' ಇದೆ. ಬ್ರಾಮ್ಟನ್ ನಗರದಲ್ಲಿ ಹೆಚ್ಚು ಇವೆ ಎನ್ನುತ್ತಾರೆ. ಇಲ್ಲಿನ ಆರ್ಟ್ ಗ್ಯಾಲರಿ, ಮ್ಯೂಸಿಯಮ್‌ಗಳು ಅತ್ಯಾಧುನಿಕ ಸೌಲಭ್ಯಗಳಿಂದ ಕೂಡಿದ್ದು CCTV ಕ್ಯಾಮರಾ ಎಲ್ಲೆಲ್ಲಿಯೂ ನಿಮ್ಮನ್ನು ಹಿಂಬಾಲಿಸುತ್ತವೆ. ಆರ್ಟ್ ಗ್ಯಾಲರಿಯಲ್ಲಿ ಗನ್‌ಮ್ಯಾನ್‌ಗಳೂ ಇರುತ್ತಾರೆ. ಏಕೆಂದರೆ ಈ ಪಶ್ಚಿಮ ದೇಶಗಳಲ್ಲಿ ಕಲಾಕೃತಿಗಳ ಕಳ್ಳತನ ಬಹಳ ಹೆಚ್ಚಂತೆ. ಒಟ್ಟಿನಲ್ಲಿ ಎಲ್ಲೆಲ್ಲೂ ಕಾಣುವುದು ಸ್ಥಳ ವೈಶಾಲ್ಯ. ಕೇವಲ ೨೦೦ ವರ್ಷದ ಇತಿಹಾಸ ಹೊಂದಿರುವ ಕೆನಡಾ ಬಹುಮಟ್ಟಿಗೆ ಅಮೇರಿಕದ ಸಂಸ್ಕೃತಿಯನ್ನು ರೂಢಿಸಿಕೊಂಡಿರುವ ಒಂದು ಆಧುನಿಕ ದೇಶ. ಇಲ್ಲಿನ ಆಡಳಿತ ಭಾಷೆಗಳು ಇಂಗ್ಲೀಷ್ ಹಾಗೂ ಫ್ರೆಂಚ್. ಫ್ರೆಂಚ್ ಭಾಷೆಯನ್ನು ಬಹಳವಾಗಿ ಬಳಸುವ ರಾಜ್ಯ Quebec. Quebec ರಾಜ್ಯದ ಮುಖ್ಯ ನಗರವೇ ಮಾಂಟ್ರೀಯಲ್. ಇಲ್ಲಿನ ಚರ್ಚ್‌ಗಳು ಕಟ್ಟಡ ವಿನ್ಯಾಸಗಳಲ್ಲಿ ವಿನೂತನವಾಗಿವೆ. ಟೋರಾಂಟೋ ನಗರಕ್ಕೆ ಹೋಲಿಸಿದರೆ ಇದು ತೀರಾ ಭಿನ್ನ ನಗರ. ವ್ಯಾಂಕೋವರ್, ಕ್ಯಾಲ್‌ಗರಿ, ಏಡ್‌ಮಾಂಟನ್, ಅಲ್‌ಬರ್ಟಾ ಹೀಗೆ ಇನ್ನೂ ಹಲವಾರು ಖ್ಯಾತ ನಗರಗಳು ಕೆನಡಾ ದೇಶದಲ್ಲಿ ಇವೆ. ಇಡೀ ಕೆನಡಾ ದೇಶವನ್ನು ನೋಡಿ ಬರಬೇಕೆಂದರೆ ಕಡೆಯ ಪಕ್ಷ ಒಂದು ವರ್ಷವಾದರೂ ಬೇಕೇನೊ.

■

## ಬೇಡದ ಕರೆಗಳ ಕಿರಿ–ಕಿರಿಗಳಿಗಿನ್ನು ಕೊನೆ

ಬೇಡದ ಕರೆಗಳ ಕಿರಿ–ಕಿರಿಯನ್ನು ಅನುಭವಿಸದ ಮೊಬೈಲ್ ಬಳಕೆದಾರರು ಇರಲಿಕ್ಕಿಲ್ಲ. 'ಸಾಲಬೇಕೇ?' 'ವಿಮೆ ಮಾಡಿಸುತ್ತೀರಾ?' 'ವಾಹನ ಕೊಳ್ಳುತ್ತೀರಾ?' 'ಕ್ಲಬ್‌ನ ಸದಸ್ಯತ್ವ ಪಡೆಯಲು ಇಚ್ಛಿಸುತ್ತೀರಾ?' 'ಮನೆ ಖರೀದಿಸುತ್ತೀರಾ?' ಇಂತಹ ಬೇಡದ ವ್ಯಾಪಾರಿ ಕರೆಗಳು ಮೊಬೈಲ ದೂರವಾಣಿಗೆ ಯಾವಾಗ ಬರುತ್ತದೆಂದು ಹೇಳಲಾಗದು. ಇದನ್ನು ಬಳಕೆದಾರನ ಗೌಪ್ಯತೆ ಹಕ್ಕಿನ ಉಲ್ಲಂಘನೆ ಎಂದು ವಿಶ್ಲೇಷಿಸಿದರೂ ಇದನ್ನು ತಡೆಯಲು ಕಾನೂನಿನಲ್ಲಿ ಸೂಕ್ತ ಮಾರ್ಗೋಪಾಯಗಳಿರಲಿಲ್ಲ. TRAI (ಟೆಲಿಕಾಂ ರೆಗ್ಯುಲೇಟರಿ ಅಥಾರಿಟಿ ಆಫ್ ಇಂಡಿಯಾ) ರೂಪಿಸಿದ್ದ ನಿಯಮಾವಳಿಗಳು ಸಡಿಲವಾಗಿದ್ದರಿಂದ ವ್ಯಾಪಾರಿ ಸೇವಾದಾತರು ಇದರ ಲಾಭ ಪಡೆಯುತ್ತಿದ್ದರು.

ಈಗ ಈ ನಿಯಮಾವಳಿಗಳನ್ನು ಬಿಗಿಗೊಳಿಸಲು ನಿರ್ಧರಿಸಿರುವ TRAI, ಸಂಬಂಧಪಟ್ಟ ವ್ಯಕ್ತಿಗಳೊಂದಿಗೆ ಈ ಕುರಿತ ಚರ್ಚೆ ಆರಂಭಿಸಿದೆ.

## ಔದ್ಯೋಗಿಕ ವಿವಾದಗಳ ಕಾಯ್ದೆಗೆ ತಡೆ

ಔದ್ಯೋಗಿಕ ವಿವಾದಗಳ(ತಿದ್ದುಪಡಿ) ಕಾಯ್ದೆ ೨೦೧೦ಗೆ ತಮಿಳುನಾಡು ಉಚ್ಚನ್ಯಾಯಾಲಯ ತಡೆ ಆಜ್ಞೆನೀಡಿದೆ. ಈ ತಡೆ ಆಜ್ಞೆ ತಮಿಳುನಾಡು ರಾಜ್ಯದಲ್ಲಿ ಮಾತ್ರ ಜಾರಿಯಲ್ಲಿರುತ್ತದೆ.

೧೯೪೭ರ ಔದ್ಯೋಗಿಕ ವಿವಾದಗಳ ಕಾಯ್ದೆಯಡಿ ರಚಿಸಲಾಗಿರುವ ಟ್ರಿಬ್ಯುನಲ್‌ಗಳಲ್ಲಿ ನ್ಯಾಯಾಧೀಶರು ಮಾತ್ರ ಉಪಸ್ಥಿತಾಧಿಕಾರಿ ಎಂದು ಕಾರ್ಯನಿರ್ವಹಿಸಬಹುದಾಗಿದ್ದು, ಹೊಸ ತಿದ್ದುಪಡಿಗಳು ಜಾರಿಗೆ ಬಂದರೆ ಸೆ.೭ ಮತ್ತು ೭(ಎ) ರಂತೆ ರಾಜ್ಯ ಕಾರ್ಮಿಕ ಇಲಾಖೆಯ ಅಧಿಕಾರಿಗಳೂ ಟ್ರಿಬ್ಯುನಲ್‌ನ ಉಪಸ್ಥಿತಾಧಿಕಾರಿಯು ಕಾರ್ಯ ನಿರ್ವಹಿಸಬಹುದಾಗಿದೆ.

# ಮಧ್ಯಸ್ಥಿಕೆ ಇತ್ಯರ್ಥಗಳು

Just ಮಾತ್ ಮಾತಲ್ಲಿ...



ಎಸ್.ಎನ್. ಪ್ರಶಾಂತ ಚಂದ್ರ
snpchandra@gmail.com

ಮಧ್ಯಸ್ಥಿಕೆಯ ಇತ್ಯರ್ಥಗಳಿಂದ ನ್ಯಾಯಾಂಗ ವ್ಯವಸ್ಥೆಯ ಮೇಲಿನ ಹೊರೆ ಕಡಿಮೆಯಾಗುವುದರಲ್ಲಿ ಸಂದೇಹವೇ ಇಲ್ಲ. ಪಕ್ಷಗಾರರು ಮಧ್ಯಸ್ಥಿಕೆಯ ಪ್ರಕ್ರಿಯೆಯಲ್ಲಿ ಸ್ವ-ಇಚ್ಛೆಯಿಂದ ಭಾಗವಹಿಸಿ ಮಾಡಿಕೊಳ್ಳುವ ಕರಾರುಗಳಿಂದ ಪಕ್ಷಗಾರರು ಅಂತಹ ಡಿಕ್ರಿಗಳ ಅನುಷ್ಠಾನಕ್ಕೆ ಮತ್ತೊಮ್ಮೆ ನ್ಯಾಯಾಂಗದ ಮೊರೆ ಹೋಗುವ ಸಂಭವಗಳು ಬಹಳ ವಿರಳ.

ಇಂದಿನ ನ್ಯಾಯಾಂಗ ವ್ಯವಸ್ಥೆಯಲ್ಲಿ ಪಕ್ಷಗಾರರ ಅನಿಸಿಕೆ. ಆಕಾಂಕ್ಷೆಗಳಿಗೆ ಹೆಚ್ಚಿನ ಆದ್ಯತೆ ಇಲ್ಲ. ಪಕ್ಷಗಾರರು ಹಾಜರಿಸಿದ ದಾಖಲೆಗಳನ್ನು, ಲಿಖಿತ ಹೇಳಿಕೆಗಳನ್ನು ಕೂಲಂಕಷವಾಗಿ ಗಮನಿಸಿ ನ್ಯಾಯಾಲಯ ತನ್ನ ತೀರ್ಪನ್ನು ಪಕ್ಷಗಾರರ ಮೇಲೆ ಹೇರುತ್ತದೆ. ನ್ಯಾಯಾಲಯದ ತೀರ್ಪು ನ್ಯಾಯಯುತ(adjudicatory) ರೂಪವಾಗಿದ್ದು, ತನ್ನ ಅಭಿಪ್ರಾಯಗಳನ್ನು, ಅಹವಾಲುಗಳನ್ನು ನ್ಯಾಯಾಲಯ ಸರಿಯಾಗಿ ಗೌರವಿಸಿಲ್ಲ ಅಥವಾ ಅರ್ಥೈಸಿಕೊಳ್ಳಲಿಲ್ಲ ಎಂಬ ಕೊರಗು ಪಕ್ಷಗಾರನಲ್ಲಿ ಇದ್ದೆ ಇರುತ್ತದೆ.

ಈ ರೀತಿಯ ನಿರ್ಣಯಗಳಿಂದ, ಪಕ್ಷಗಾರರ ನಡುವೆ ನಂಬಿಕೆ ಬೆಳೆದು ಒಲವು ಮರುಕಳಿಸಿ, ಭವಿಷ್ಯತ್ತಿನಲ್ಲಿ ಉತ್ತಮ ಬಾಂಧವ್ಯ ಅಡಿಪಾಯವಾಗುತ್ತದೆ.

ಪಕ್ಷಗಾರನಿಗೆ ನ್ಯಾಯಾಲಯದ ತೀರ್ಪು ಅಸಮಾಧಾನಕರ ಎನಿಸಿದಾಗ, ತೀರ್ಪನ್ನು ಸ್ವಾಗತಿಸುವುದಿಲ್ಲ ಮತ್ತು ಮೇಲ್ಮನವಿಗೆ ಸಾಧ್ಯತೆ ಇಲ್ಲದಿದ್ದಾಗ, ತೀರ್ಪಿನ ಅನುಷ್ಠಾನವನ್ನು ತಡೆಯಲು ಹಲವಾರು ಅಡ್ಡಿಯನ್ನು ಉಂಟುಮಾಡುತ್ತಾನೆ. ಎದುರುದಾರ ನ್ಯಾಯಾಲಯದ ತೀರ್ಪು ತನ್ನ ಪರವಾಗಿ ಬಂದ ನಂತರ, ಅನುಷ್ಠಾನಕ್ಕೆ ಮತ್ತೆ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡುವಂತಾಗುತ್ತದೆ. ಈ ರೀತಿಯಾಗಿ, ಮತ್ತೆ ನ್ಯಾಯಾಲಯದ ಮೇಲೆ ಹೊರೆ ಜಾಸ್ತಿಯಾಗಿ, ಎಲ್ಲಾ ಪ್ರಕ್ರಿಯೆಗಳು ತಡವಾಗುತ್ತಾ ಹೋಗುತ್ತದೆ.

ಆದರೆ ಮಧ್ಯಸ್ಥಿಕೆಯ ವೈಶಿಷ್ಟ್ಯವೇನೆಂದರೆ ಇಲ್ಲಿ ಪಕ್ಷಗಾರರು ಸ್ವ-ಇಚ್ಛೆಯಿಂದ ಭಾಗವಹಿಸಿ, ಇತ್ಯರ್ಥದ ಸಂಪೂರ್ಣ ಹಿಡಿತವನ್ನು ತಮ್ಮಲ್ಲಿಯೇ ಇಟ್ಟುಕೊಂಡಿರುತ್ತಾರೆ. ನಿರ್ಣಯ ಮನಃಪೂರ್ವಕವಾಗಿದ್ದಾಗ, ಕರಾರನ್ನು ತಯಾರಿಸಿ, ನ್ಯಾಯಾಲಯದಲ್ಲಿ ಡಿಕ್ರಿಯಾಗುತ್ತದೆ. ಇಂತಹ ಸ್ವ-ಇಚ್ಛೆಯ ಡಿಕ್ರಿಗಳ ಅನುಷ್ಠಾನದ ಸಮಯವನ್ನು ಪಕ್ಷಗಾರರೇ ನಿಗದಿಪಡಿಸುವುದರಿಂದ, ತಾವೇ ಅದನ್ನು ಚಾಚು ತಪ್ಪದೇ ಪಾಲಿಸುತ್ತಾರೆ. ಯಾಕೆಂದರೆ, ಪ್ರಕ್ರಿಯೆಯಲ್ಲಿ ಸ್ವ-ಇಚ್ಛೆಯಿಂದ ಭಾಗವಹಿಸಿ, ಎದುರುದಾರರೊಂದಿಗೆ ಚರ್ಚಿಸಿ, ಇಬ್ಬರ ಬೇಡಿಕೆಗಳನ್ನು ಅರಿತು ಮಾಡಿಕೊಂಡಂತಹ ಇತ್ಯರ್ಥವಾದಾಗ ಅನುಷ್ಠಾನದ ಜವಾಬ್ದಾರಿಯನ್ನು ತಾನೇ ಹೊತ್ತು ಅದರಂತೆ ಸಮಯ ನಿಗದಿ ಮಾಡಿಕೊಂಡಿರುತ್ತಾನೆ. ಹಾಗೂ ತನ್ನ ಮೇಲಿನ ನಂಬಿಕೆಗೆ ದ್ರೋಹ ಬರಬಾರದೆಂಬ ಉದ್ದೇಶದಿಂದ, ಡಿಕ್ರಿಯ ಅನುಷ್ಠಾನವನ್ನು ಕಟ್ಟು ನಿಟ್ಟಾಗಿ ಪಾಲಿಸುತ್ತಾನೆ. ಒಟ್ಟಿನಲ್ಲಿ ಮನಃಪೂರ್ವಕ ನಿರ್ಣಯದ ನಿಬಂಧನೆಗಳನ್ನು ಚಾಚು ತಪ್ಪದೇ ನಿರ್ವಹಿಸಿ, ತಮ್ಮಿಬ್ಬರ ಮಧ್ಯೆ ಇರುವ ಕರಾರಿಗೆ ಸಂಪೂರ್ಣ ಮಾನ್ಯತೆ ಕೊಟ್ಟು ಗೌರವಿಸಿ, ಎದುರುದಾರನ ನಂಬಿಕೆಗೆ ಪಾತ್ರನಾಗಲು ಬಯಸುತ್ತಾನೆ.

ಈಗ ಹೇಳಿ, ಮಧ್ಯಸ್ಥಿಕೆಯ ನಿರ್ಣಯದ ಕರಾರುಗಳು ಸ್ವ-ಅನುಷ್ಠಾನಕಾರಿಯಲ್ಲವೇ?

ಈ ರೀತಿಯ ನಿರ್ಣಯಗಳಿಂದ, ಪಕ್ಷಗಾರರ ನಡುವೆ ನಂಬಿಕೆ ಬೆಳೆದು ಒಲವು ಮರುಕಳಿಸಿ, ಭವಿಷ್ಯತ್ತಿನಲ್ಲಿ ಉತ್ತಮ ಬಾಂಧವ್ಯ ಅಡಿಪಾಯವಾಗುತ್ತದೆ. ತಮ್ಮಲ್ಲಿದ್ದ ಸಂಘರ್ಷವನ್ನು ಒತ್ತಿಟ್ಟು, ವ್ಯಾಜ್ಯದ ರೂಪದಲ್ಲಿ ನ್ಯಾಯಾಲಯದ ಮೊರೆ ಹೊಕ್ಕು, ಮಧ್ಯಸ್ಥಿಕೆಯ ಮೂಲಕ ತಮ್ಮಿಬ್ಬರ ನಡುವಿನ ಸಂಘರ್ಷ ಸಂಪೂರ್ಣ ಶಮನವಾಗಿಸಿ ಮುಂದಿನ ದಿನಗಳಲ್ಲಿ, ಪಕ್ಷಗಾರರ ಮತ್ತು ಅವರ ಬಂಧು ಬಳಗದವರ ನಡುವೆ ಪುನಃ ಬಾಂಧವ್ಯಕ್ಕೆ ಅವಕಾಶವಾಗಿ, ಅವರವರ ಕ್ಷೇತ್ರದ ಕಾರ್ಯವ್ಯಾಪ್ತಿಯಲ್ಲಿ, ಒಂದು ಹೊಸ ಅಧ್ಯಾಯವನ್ನು ಪ್ರಾರಂಭಿಸಲು ಮಧ್ಯಸ್ಥಿಕೆ ಪ್ರಕ್ರಿಯೆ ಅನುವಾಗುತ್ತದೆ. ಅಷ್ಟೇ ಅಲ್ಲ, ಪಕ್ಷಗಾರರು ಈ ಪ್ರಕ್ರಿಯೆಯು ವಾಣಿಜ್ಯ ಕ್ಷೇತ್ರದಲ್ಲಿ ಲಾಭವನ್ನು ಪಡೆದು, ತಮ್ಮ ಅಮೂಲ್ಯವಾದ ಸಮಯವನ್ನು ಉಳಿಸುವುದಲ್ಲದೇ ಪ್ರಗತಿಯತ್ತ ಕೇಂದ್ರೀಕರಿಸಿ, ದೇಶದಲ್ಲಿರುವ ಆರ್ಥಿಕ ಹಿಂಜರಿತ ಎಂಬ ಪಿಡುಗನ್ನು ಹೋಗಲಾಡಿಸಲು ಮಧ್ಯಸ್ಥಿಕೆ ಸಹಾಯವಾಗುತ್ತದೆ.

---

*ಅನಿರೀಕ್ಷಿತ ತಿರುವುಗಳ ಕುತೂಹಲಕರ ಪ್ರಕರಣ*

## 'ಬಂಡಾಯ ಶಾಸಕರು ಅನರ್ಹರು': ಉಚ್ಚ ನ್ಯಾಯಾಲಯ.

ರಾಜ್ಯ ರಾಜಕೀಯದಲ್ಲಿ ಸಂಚಲನ ಉಂಟುಮಾಡಿದ್ದ ಭಿನ್ನ ಮತೀಯರ ಬಂಡಾಯದ ಬಾವುಟ ಸಧ್ಯಕ್ಕೆ ಮುರಿದು ಬಿದ್ದಿದೆ.

ಕದನ ಕುತೂಹಲಿಗಳಿಗೆ ಇಲ್ಲಿದೆ ಉಚ್ಚ ನ್ಯಾಯಾಯಲದ ತೀರ್ಪಿನ ಮುಖ್ಯಾಂಶಗಳು.

ಆಡಳಿತಾರೂಢ ಬಿಜೆಪಿಯ ೧೧ ಶಾಸಕರು ಮುಖ್ಯ ಮಂತ್ರಿಯ ವಿರುದ್ಧ ಬಂಡೆದ್ದು ನಾಯಕತ್ವದ ವಿರುದ್ಧ ತಿರುಗಿ ಬಿದ್ದರು. ಇವರನ್ನು ವಿಧಾನ ಸಭೆಯ ಸ್ಪೀಕರ್ ತಮ್ಮ ಅಕ್ಟೋಬರ್ ೧೦ರ ಆಜ್ಞೆಯಂತೆ ವಿಧಾನ ಸಭೆಯಿಂದ ಅನರ್ಹಗೊಳಿಸಿದರು. ಪ್ರಕರಣ ಉಚ್ಚ ನ್ಯಾಯಾಲಯದ ಮೆಟ್ಟಿಲೇರಿತು.

ಪ್ರಥಮ ಹಂತದಲ್ಲಿ ದ್ವಿಸದಸ್ಯ ಪೀಠ,


- ಸದಸ್ಯರನ್ನು ಅನರ್ಹಗೊಳಿಸುವಲ್ಲಿ ನಿಯಮಗಳ ಪಾಲನೆಯಾಗಿದೆಯೆ?
- ಸದಸ್ಯರನ್ನು ಅನರ್ಹಗೊಳಿಸುವಲ್ಲಿ ಸಹಜ ನ್ಯಾಯದ ನಿಯಮಗಳನ್ನು ಉಲ್ಲಂಘಿಸಲಾಗಿದೆಯೆ?
- ಸದಸ್ಯರನ್ನು ಅನರ್ಹಗೊಳಿಸಿರುವ ಆಜ್ಞೆ ದುರುದ್ದೇಶ ಪೂರಿತವೆ?
- ಸದಸ್ಯರನ್ನು ಅನರ್ಹಗೊಳಿಸಿರುವ ಆಜ್ಞೆ ಭಾರತದ ಸಂವಿಧಾನದ ೧೦ನೆ ಪರಿಚ್ಛೇದದ ಭಾಗ ೨ (೧)(ಎ) ಯನುಗುಣವಾಗಿದೆಯೆ?

ಎಂಬ ನಾಲ್ಕು ವಿವಾದಾಂಶಗಳನ್ನು ರೂಪಿಸಿಕೊಂಡು, ಮೊದಲ ಮೂರು ಪ್ರಶ್ನೆಗಳನ್ನು ಬಹುಮತದಿಂದ ಸ್ಪೀಕರ್‌ರ ಆಜ್ಞೆಯನ್ನು ಎತ್ತಿ ಹಿಡಿಯುವಂತೆ ಉತ್ತರಿಸಿತು.

ನಾಲ್ಕನೆಯ ವಿವಾದಾಂಶದ ಬಗ್ಗೆ ಪೀಠದಲ್ಲಿ ಭಿನ್ನಾಭಿಪ್ರಾಯ ಮಾಡಿದ್ದರಿಂದ ಕೇವಲ ಆ ಪ್ರಶ್ನೆಯನ್ನು ಮಾತ್ರ ಮೂರನೆ ನ್ಯಾಯಾಧೀಶರ ಏಕಸದಸ್ಯ ಪೀಠಕ್ಕೆ ವರ್ಗಾಯಿಸಿ ಅವರ ಅಭಿಪ್ರಾಯ ಕೇಳಲಾಗಿತ್ತು.

ಅ. ೨೯ರಂದು ಹೊರಬಿದ್ದ ತೀರ್ಪಿನಂತೆ ಸ್ಪೀಕರ್‌ರ ಆಜ್ಞೆ ಸಂವಿಧಾನದ ೧೦ನೆ ಪರಿಚ್ಛೇದದ ಭಾಗ (೨) (೧) (ಎ)ಯ ಅನುಗುಣವಾಗಿದೆ.

ಈ ಶಾಸಕರು ಈಗ ಅನರ್ಹರೆಂದು ತೀರ್ಮಾನವಾಗಿದೆ.




## ಬ್ಯಾಂಕ್ ಖಾತೆಗೆ ನಾಮನಿರ್ದೇಶನ

ವಾರಸು ಹಕ್ಕಿಗೆ ಚ್ಯುತಿಯಿಲ್ಲ. ಬ್ಯಾಂಕಿಂಗ್ ರೆಗ್ಯುಲೇಶನ್ ಆ್ಯಕ್ಟ್, ಸೆ.೪೫ ZA (೩)ರ ಅಡಿ ಖಾತೆದಾರ ಮಾಡುವ ನಾಮ ನಿರ್ದೇಶನ, Nomination ದಿಂದ ಮೃತ ಖಾತೆದಾರನ ವಾರಸುದಾರರ ವಾರಸಾಹಕ್ಕಿಗೇನೂ ಚ್ಯುತಿ ಇಲ್ಲ. ಇದು ಸರ್ವೋಚ್ಚ ನ್ಯಾಯಾಲಯದ ಇತ್ತೀಚಿನ ತೀರ್ಮಾನ.

ನಾಮ ನಿರ್ದೇಶಿತ ವ್ಯಕ್ತಿ ಖಾತೆದಾರನ ಮರಣಾನಂತರ ಖಾತೆದಾರನ ಸ್ಥಾನವನ್ನು ಆಕ್ರಮಿಸಿಕೊಳ್ಳುತ್ತಾನೆ. ಹೊರತು ಖಾತೆಯಲ್ಲಿನ ಹಣ ಅಥವಾ ಒಡವೆ-ವಸ್ತುಗಳ ಸಂಪೂರ್ಣ ಮಾಲೀಕನಾಗುವುದಿಲ್ಲ. ಮೃತನ ವಾರಸುದಾರರಿಗೆ ಕಾನೂನುಬದ್ಧ ವಾರಸಾಹಕ್ಕು ಇದ್ದರೆ, ನಾಮ ನಿರ್ದೇಶನವನ್ನು ವಾರಸಾ ಕಾನೂನಿಗೆ ಚ್ಯುತಿಬಾರದಂತೆ ಜಾರಿಗೊಳಿಸಬೇಕು ಎಂದಿದೆ ಸರ್ವೋಚ್ಚ ನ್ಯಾಯಾಲಯ.

ರಾಮಚಂದ್ರ ತಲವಾರ ತಾವು ತಮ್ಮ ಮೃತ ತಾಯಿಯ ಬ್ಯಾಂಕ್ ಖಾತೆಗೆ ನಾಮ ನಿರ್ದೇಶನವನ್ನು ಹೊಂದಿರುವುದರಿಂದ ತಮ್ಮ ಅಣ್ಣ-ತಮ್ಮಂದಿರಿಗಾಗಲೀ, ಕುಟುಂಬದ ಇತರೇ ಸದಸ್ಯರಿಗಾಗಲೀ ಖಾತೆಯಲ್ಲಿನ ಹಣದ ಮೇಲೆ ಹಕ್ಕು ಇಲ್ಲವೆಂದು ಪ್ರತಿ-ಪಾದಿಸಿದ್ದರು. ಈ ಪ್ರತಿ-ಪಾದನೆಯನ್ನು ತಳ್ಳಿ ಹಾಕಿರುವ ಸರ್ವೋಚ್ಚ ನ್ಯಾಯಾಲಯ ಬ್ಯಾಂಕ್ ವ್ಯವಹಾರಗಳ ನೀತಿ ನಿಯಮಗಳನ್ನು ಕ್ರೋಢೀಕರಿಸುವ ದೃಷ್ಟಿಯಿಂದ ಬ್ಯಾಂಕಿಂಗ್ ರೆಗ್ಯುಲೇಶನ್ ಆ್ಯಕ್ಟನ್ನು ಜಾರಿಗೊಳಿಸಲಾಗಿದೆಯೇ ಹೊರತು ವಾರಸಾ ಹಕ್ಕನ್ನು ಮೊಟಕುಗೊಳಿಸಲು ಅಲ್ಲ ಎಂದು ಅಭಿಪ್ರಾಯಪಟ್ಟಿದೆ.

## ಅಪಹರಣಕ್ಕೇನು ಶಿಕ್ಷೆ?

ವಿಮಾನ, ಬಸ್ಸು, ರೈಲನ್ನು ಅಪಹರಿಸಿ ಪ್ರಯಾಣಿಕರನ್ನು ಒತ್ತೆಯಾಳಾಗಿ ಇಟ್ಟುಕೊಂಡು ಸರಕಾರವನ್ನು ಬೆದರಿಸುವವರಿಗೆ ಮರಣದಂಡನೆಯೇ ಸರಿಯಾದ ಶಿಕ್ಷೆ ಎಂದು ಕೆಲವರ ಅಭಿಪ್ರಾಯ. ಈ ಬಗ್ಗೆ ಕಾನೂನಿಗೆ ಸೂಕ್ತ ತಿದ್ದುಪಡಿ ತರಲು ಬಹಳ ದಿನಗಳ ಬೇಡಿಕೆ ಇದೆ.

ಈ ಬೇಡಿಕೆಯ ಸಾಧ್ಯಾಸಾಧ್ಯತೆಗಳನ್ನು ಪರಿಶೀಲಿಸಲು ರಚಿಸಲಾಗಿದ್ದ ಪಾರ್ಲಿಮೆಂಟರಿ ಕಮಿಟಿಯೊಂದು ಆ್ಯಂಟಿ ಹೈಜಾಕಿಂಗ್(ಅಮೆಂಡ್‌ಮೆಂಟ್) ಬಿಲ್ ೨೦೧೦ರ ಮೇಲೆ ತನ್ನ ವರದಿಯನ್ನು ರಾಜ್ಯ ಸಭಾಧ್ಯಕ್ಷ ಹಮೀರ ಅನ್ಸಾರಿ ಮತ್ತು ಲೋಕಸಭಾ ಸ್ಪೀಕರ್ ಮೀರಾಕುಮಾರ್ ಅವರಿಗೆ ಸಲ್ಲಿಸಿದೆ.

ಸಮಿತಿ ಅಪಹರಣಕಾರರಿಗೆ ಮರಣದಂಡನೆ ವಿಧಿಸುವ ಕಾನೂನಿನ ತಿದ್ದುಪಡಿಯನ್ನು ಬೆಂಬಲಿಸಿದೆ. ಆದರೆ, ಇದೇ ವೇಳೆ ಮರಣದಂಡನೆಯೊಂದೇ ತಮಗುಳಿದಿರುವ ದಾರಿ ಎಂದು ತಿಳಿದರೆ ಅಪಹರಣಕಾರರು ಒತ್ತೆಯಾಳುಗಳನ್ನು ಕೊಲ್ಲದೆಯೇ ಬಿಟ್ಟಾರೆಯೇ? ಎಂಬ ಪ್ರಶ್ನೆಯನ್ನೂ ಎತ್ತಿದೆ.

ಪ್ರಕಾಶಕರು : ಎಸ್. ಎನ್. ಪ್ರಶಾಂತಚಂದ್ರ, ಲಹರಿ ವಕೀಲರ ವೇದಿಕೆ, ನಂ. ೨೯೮೦, 'ಲಕ್ಷ್ಮೀದೀಪ', ೧೭ನೇ ಅಡ್ಡರಸ್ತೆ, ಬನಶಂಕರಿ ೨ನೇ ಹಂತ, ಬೆಂಗಳೂರು-೫೬೦ ೦೭೦
ಮುದ್ರಣ : ವೀ ಕೇ ಪ್ರಿಂಟರ್ಸ್ & ಪಬ್ಲಿಷರ್ಸ್, ನಂ. ೩೯೬, ಊಳಿಗಾ ಕಾಂಪ್ಲೆಕ್ಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-೫೬೦ ೦೦೩ ಸಂಪರ್ಕಿಸಿ : aravindneglur@gmail.com
KARBIL 01707 / 10 /1/2009-TC MAG/(2)/LR/PRB/70/10-11 ಸಂಪಾದಕರು : ಅರವಿಂದ ಎಂ. ನೆಗಳೂರ